MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

YUVA MARGA NEWS PAPER VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 05 | ಸಂಚಿಕೆ: 99 | ಮಂಗಳವಾರ : 03-02-2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 99 | TUESDAY : 03-02-2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

# ರಾಯಚೂರು ಉತ್ಸವದ ಮಕ್ಕಳ ಹಬ್ಬಕ್ಕೆ ಕಿಕ್ಕಿರಿದು ತುಂಬಿದ ಸ್ಟೇಡಿಯಂ, ಚಿಣ್ಣರ ಸಂಭ್ರಮ

ಯುವಮಾರ್ಗ ಸುದ್ದಿ

**ರಾಯಚೂರು ಫೆ.2–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಆಚರಣೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಫೆ.2 ಮತ್ತು ಫೆ.3ರಂದು ಎರಡು ದಿನಗಳ ಕಾಲ ಆಯೋಜನೆ ಮಾಡಿದ ಮಕ್ಕಳ ಹಬ್ಬಕ್ಕೆ ಮೊದಲನೇ ದಿನ ಫೆ.2ರಂದು ಯಶಸ್ವಿಯಾಗಿ ಚಾಲನೆ ಸಿಕ್ಕಿತು.

ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಮಕ್ಕಳ ಹಬ್ಬದ ನಿಮಿತ್ತ ಹಾಕಿದ್ದ ಬೇರೆ ಬೇರೆ ಬಗೆಯ ಪ್ರದರ್ಶನ ಕಾರ್ಯಕ್ರಮಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರಾದ ಕೇಶವರೆಡ್ಡಿ ಅವರು ಚಾಲನೆ ನೀಡಿದರು.

ರಾಯಚೂರಿನ ಕವಿ ಲೇಖಕ ಈರಣ್ಣ ಬೆಂಗಾಲಿ ಅವರ ಫೋಟೋಗ್ರಫಿಯ ನಾನಾ ಹಕ್ಕಿಗಳ ಚಿತ್ರಗಳ ಮಳಿಗೆ, ವಿವಿಧ ಗಣ್ಯ ವ್ಯಕ್ತಿಗಳ ಕಾರ್ಟೂನ್ ಪ್ರದರ್ಶನ ಮಳಿಗೆ, ಮುಖವಾಡ ತಯಾರಿ ಮಳಿಗೆ, ಗೂಡುದೀಪ ತಯಾರಿ ಮಳಿಗೆ, ಗಾಳಿಪಟ ಮಳಿಗೆ, ಆರೋಗ್ಯಕರವಾಗಿ ತಿನ್ನಿರಿ, ಆರೋಗ್ಯವಾಗಿರಿ ಎಂಬ ಸಂದೇಶದ ನಾನಾ ಮಳಿಗಳಿಗೆ ಮತ್ತು ರೋಬ್ಯಾಟಿಕ್ ಚಿಟ್ಟೆಗಳ ಪ್ರದರ್ಶನದ ವೀಕ್ಷಣೆ ನಡೆಸಿ ಮಕ್ಕಳು ಖುಷಿ ವ್ಯಕ್ತಪಡಿಸಿದರು.ವಿದ್ಯಾರ್ಥಿಗಳ ನೋಂದಣಿ: ಈ ಕಾರ್ಯಕ್ರಮದಲ್ಲಿ ರಾಯಚೂರು ಸಿಟಿ ಸೇರಿದಂತೆ ಬೇರೆ ಬೇರೆ ಕಡೆಯ ಸರ್ಕಾರಿ ಹಾಗೂ ಖಾಸಗಿ ಶಾಲೆಯ ಮಕ್ಕಳು ಭಾಗಿಯಾಗಿದ್ದರು. ಮೊದಲನೇ ದಿನ ಸುಮಾರು 3 ಸಾವಿರಕ್ಕೂ ಹೆಚ್ಚು ಮಕ್ಕಳನ್ನು ನೋಂದಣಿ ಮಾಡಿಕೊಳ್ಳಲಾಯಿತು. ಬೆಳಿಗ್ಗೆ 9 ಗಂಟೆ ವೇಳೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಜಿಲ್ಲೆಯ ವಿವಿಧ










ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ವಿದ್ಯಾರ್ಥಿಗಳು ಕ್ರೀಡಾಂಗಣದಲ್ಲಿ ವರದಿ ಮಾಡಿಕೊಂಡು ರೋಬೋಟಿಕ್ ಪ್ರಾಣಿಗಳು, ರೋಬೋಟ್ ಪ್ರದರ್ಶನ, ಗೊಂಬೆ ನೃತ್ಯ, ಗಾಳಿಪಟ, ಮುಖವಾಡ ತಯಾರಿಕೆ, ಜೇಡಿಮಣ್ಣು ಸೇರಿದಂತೆ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ಸಂಭ್ರಮಿಸಿದರು. ಕುಮಾರಿ ತನ್ವಿ ನಾಯಕ ಅವರು ಮೊದಲಿಗೆ ಭರತನಾಟ್ಯ ನೃತ್ಯ ಗೈದಳು. ಕೋಳಿ ನೃತ್ಯ, ಜಾದೂ ಪ್ರದರ್ಶನ ನಂತರ ಮಾಣಿಕ ಪ್ರಭು ಅಕಾಡೆಮಿ ಫಾರ್ ದಿ ಬ್ಲೈಂಡ್ ರಾಯಚೂರು ವತಿಯಿಂದ ಸಮೂಹ ಗಾಯನ, ಕುಮಾರಿ ಭಕ್ತಿ ತಂದೆ ರಾಜಶೇಖರ ಅವರಿಂದ ವಚನ ಸಂಗೀತ, ಕುಮಾರ ವೆಂಕಟೇಶ ನಂಜಲದಿನ್ನಿ ಅವರಿಂದ ಹೆಜ್ಜೆಮೇಳ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಮಧ್ಯಾಹ್ನ ವೇಳೆಯಲ್ಲಿ ರಾಘವ ನಾಟ್ಯಾಮೃತ ಶಾಲೆಯಿಂದ ಭರತನಾಟ್ಯ, ಸೇಂಟ್ ಮೇರಿ ಕಾನ್ವೆಂಟ್ ಶಾಲೆ ರಾಯಚೂರು ವತಿಯಿಂದ ಜಾನಪದ ನೃತ್ಯ, ಗಬ್ಬೂರಿನ ವಿದ್ಯಾಜ್ಯೋತಿ ಶಿಕ್ಷಣ ಸಂಸ್ಥೆಯಿಂದ ಜಂಪ್ ರೋಪ್ ಮತ್ತು ಮಲ್ಲಕಂಬ, ಮಲ್ಲಟ ಕೆ.ಜಿ.ಬಿ.ವಿ. ಶಾಲೆಯಿಂದ ಕರಾಟೆ ಪಿರಾಮೀಡ್, ರಾಯಚೂರಿನ ಜ್ಞಾನಗಂಗಾ ಶಾಲೆಯಿಂದ ಜಾನಪದ ನೃತ್ಯ, ರಾಯಚೂರಿನ ಮ್ಯಾಕ್ವೆಲ್ ಶಾಲೆ ಇಂಟರ್ ನ್ಯಾಷನಲ್ ಸ್ಕೂಲ್‌ನಿಂದ ಭರತನಾಟ್ಯ, ರಾಯಚೂರಿನ ಸೇಂಟ್ ಜೇವಿಯರ್ ಶಾಲೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ, ರಾಯಚೂರಿನ ಲಯನ್ಸ್ ಪ್ರೌಢಶಾಲೆಯಿಂದ ಸಾಮೂಹಿಕ ನೃತ್ಯ, ರಾಯಚೂರಿನ ಸೇಂಟ್ ಜೇವಿಯರ್ ಶಾಲೆಯಿಂದ ಸಿಂಧೂರ ಕಾರ್ಯಾಚರಣೆ ಕುರಿತು ಕಾರ್ಯಕ್ರಮಗಳು ನಡೆದವು.

**ಶಿಕ್ಷಕರಲ್ಲಿ ಉತ್ಸಾಹ:** ಮಕ್ಕಳ ಉತ್ಸವಕ್ಕೆ ತಮ್ಮ ತಮ್ಮ ಶಾಲಾ ಮಕ್ಕಳನ್ನು ಕರೆ ತಂದಿದ್ದ ಬೇರೆ ಬೇರೆ ಶಾಲೆಗಳ ಗುರುಗಳು ಮತ್ತು ಗುರುಮಾತೆಯರು ಸಹ ಮಕ್ಕಳ ಹಬ್ಬದ ಸವಿಯನ್ನು ಕಣ್ತುಂಬಿಕೊಂಡರು.

### * ಅಶೋಕ ಕೊಳಲಿ ಕೋಳಿ ನೃತ್ಯಕ್ಕೆ ನಗು ಚೆಲ್ಲಿದ ಚಿಣ್ಣರು * ಕುದ್ರೋಳಿ ಗಣೇಶ ಅವರ ಜಾದೂಗೆ ಬೆರಗಾದ ಮಕ್ಕಳು

# ರಾಯಚೂರು ಉತ್ಸವದ ಅದ್ಭುತ ಮಕ್ಕಳ ಹಬ್ಬಕ್ಕೆ ಅದ್ಧೂರಿ ಚಾಲನೆ









ಯುವಮಾರ್ಗ ಸುದ್ದಿ

**ರಾಯಚೂರು,ಫೆ.2–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ನಿಮಿತ್ತ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಮತ್ತು ಮಹಾನಗರ ಪಾಲಿಕೆಯ ಆಶ್ರಯದದಲ್ಲಿ ಹಮ್ಮಿಕೊಂಡಿರುವ ಅದ್ದೂರಿ ಮಕ್ಕಳ ಹಬ್ಬಕ್ಕೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಫೆ.2ರಂದು ಚಾಲನೆ ನೀಡಿದರು.

ಈ ಹಬ್ಬಕ್ಕಾಗಿ ನಗರದ ಮಹಾತ್ಮ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲೆಯ ಬೇರೆ ಬೇರೆ ಶಾಲೆಯ ಮಕ್ಕಳು ಕಿಕ್ಕಿರಿದು ಸೇರಿದ್ದರು.

ಜಿಲ್ಲಾಧಿಕಾರಿಗಳು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾರ್ವಜನಿಕರ ಸಲಹೆ ಮತ್ತು ಮಕ್ಕಳಿಗಾಗಿಯೇ ನಾವು ರಾಯಚೂರು ಉತ್ಸವದಲ್ಲಿ ಮಕ್ಕಳ ಕಾರ್ಯಕ್ರಮಗಳಿಗೆ ಏರ್ಪಾಡು ಮಾಡಿದ್ದೇವೆ. ಸಾರ್ವಜನಿಕರ, ಸಂಘ ಸಂಸ್ಥೆಗಳ, ಶಿಕ್ಷಣ ಸಂಸ್ಥೆಗಳ ಸಹಕಾರ, ಪರಿಶ್ರಮದಿಂದ ಈ ಮಕ್ಕಳ ಹಬ್ಬ ನಡೆಯುತ್ತಿದೆ. ಮನರಂಜನೆ ಜೊತೆಗೆ ಜ್ಞಾನ ಸಂಪಾದನೆಗೆ ಸಹ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಮಕ್ಕಳನ್ನು ಕರೆತಂದು ಸಹಕರಿಸಿದ ರಾಯಚೂರು ಜಿಲ್ಲೆಯ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನೆಗಳ ತಿಳಿಸುವೆ. ಮಕ್ಕಳನ್ನು ಸುರಕ್ಷಿತವಾಗಿ ನೋಡಿಕೊಳ್ಳಬೇಕು ಎಂದು ಎಲ್ಲ ಶಾಲೆಗಳ ಶಿಕ್ಷಕ ಶಿಕ್ಷಕಿಯರಲ್ಲಿ ಮನವಿ ಮಾಡಿವೆ ಎಂದರು.

ಜಿಲ್ಲಾ ಪಂಚಾಯ್ ಸಿಇಓ ಈಶ್ವರ ಕಾಂದೂ ಅವರು ಮಾತನಾಡಿ, ಈ ಮಕ್ಕಳ ಹಬ್ಬವು ಜಿಲ್ಲೆಯಲ್ಲಿ ವಿನೂತನವಾಗಿ ನಡೆಯುತ್ತಿರುವುದು ನಮಗೆ ಸ್ಫೂರ್ತಿ ತಂದಿದೆ ಎಂದು ತಿಳಿಸಿದರು.(**2ನೇ ಪುಟಕ್ಕೆ**>>>)

# ಶಿಕ್ಷಣವು ಜೀವನವನ್ನ ಬದಲಾಯಿಸುವ ಅತ್ಯಂತ ಶಕ್ತಿಶಾಲಿ ಅಸ್ತ್ರ: ವಿನಯಕುಮಾರ ಗಣಾಚಾರಿ




ಯುವಮಾರ್ಗ ಸುದ್ದಿ

**ಲಿಂಗಸುಗೂರು,ಫೆ.2–** ಶಿಕ್ಷಣವು ಒಬ್ಬ ವ್ಯಕ್ತಿಯ ಜೀವನವನ್ನು ಬದಲಾಯಿಸುವ ಅತ್ಯಂತ ಶಕ್ತಿಶಾಲಿ ಅಸ್ತ್ರವಾಗಿದೆ.

ಶಿಕ್ಷಣವು ಕೇವಲ ಅಕ್ಷರ ಜ್ಞಾನವಲ್ಲ, ಬದಲಾಗಿ ವ್ಯಕ್ತಿತ್ವ ವಿಕಸನ, ಮೌಲ್ಯಗಳ ಕಲಿಕೆ ಮತ್ತು ಯಶಸ್ವಿ ಜೀವನಕ್ಕೆ ಭದ್ರಬುನಾದಿಯಾಗಿದೆ ಎಂದು ಶ್ರೀ ಉಮಾಮಹೇಶ್ವರಿ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿನಯಕುಮಾರ ಗಣಾಚಾರಿ ಹೇಳಿದರು.

ಪಟ್ಟಣದ ಶ್ರೀ ಉಮಾಮಹೇಶ್ವರಿ ಇಂಟರ್ನ್ಯಾಷನಲ್ ಶಾಲೆಯಲ್ಲಿ ಹಮ್ಮಿಕೊಂಡ ಜ್ಯೂನಿಯರ್ ಜೀನಿಯಸ್ ಅವಾರ್ಡ ಕಾರ್ಯಕ್ರಮದಲ್ಲಿ ಮಾತನಾಡಿ, ಶಿಕ್ಷಣವು ಜ್ಞಾನ, ಕೌಶಲ್ಯ, ಮೌಲ್ಯಗಳು ಮತ್ತು ಅಭ್ಯಾಸಗಳನ್ನು ಕಲಿಯುವ ಪ್ರಕ್ರಿಯೆಯಾಗಿದೆ. ಇದು ವ್ಯಕ್ತಿಗಳು ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯಲು ಸಹಾಯ ಮಾಡುತ್ತದೆ, ಭವಿಷ್ಯದ ಸವಾಲುಗಳಿಗೆ ಅವರನ್ನು ಸಿದ್ಧಪಡಿಸುತ್ತದೆ ಮತ್ತು ಸಮಾಜದ ಪ್ರಗತಿಯನ್ನು ರೂಪಿಸುತ್ತದೆ ಎಂದು ಹೇಳಿದರು.

ವಿಜ್ಞಾನ ವಿಭಾಗದ ಪ್ರಾಚಾರ್ಯ ಜಿ.ವಿ.ಸುರೇಶ ಮಾತನಾಡಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವು ನಮ್ಮ ಯೋಚನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ಕಾಲಕ್ಕೆ ತಕ್ಕಂತೆ ಹೊಸ ಹೊಸ ಆವಿಷ್ಕಾರದತ್ತ ಮುನ್ನುಗ್ಗಬೇಕು. ಚಿಕ್ಕಂದಿನಿಂದಲೆ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಬೇಕು ಎಂದರು.1280 ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ: ಜ್ಯೂನಿಯರ್ ಜೀನಿಯಸ್ ಅವಾರ್ಡ ಕಾರ್ಯಕ್ರಮದಲ್ಲಿ ಸುಮಾರು 1200 ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದು, ಆ ಪೈಕಿ 590 ವಿದ್ಯಾರ್ಥಿಗಳು 5ನೇ ತರಗತಿಯವರು ಮತ್ತು 680 ವಿದ್ಯಾರ್ಥಿಗಳು 7 ತರಗತಿಯಿಂದ ಈ ಪರೀಕ್ಷೆಗೆ ಹಾಜರಾಗಿದ್ದರು.

(**2ನೇ ಪುಟಕ್ಕೆ**>>>)

# ಸ್ವಾತಂತ್ರ್ಯವನ್ನು ನೀಡಿದ ಮಹಾನಿಯರಿಗೆ ನಾವು ಗೌರವ ದೊರೆಯುವಂತೆ ಬದುಕನ್ನು ರೂಪಿಸಿಕೊಳ್ಳಿ:ಕಲ್ಮಠ ಶ್ರೀ



ಯುವಮಾರ್ಗ ಸುದ್ದಿ

**ಮಾನ್ವಿ,ಫೆ.2–** ಪಟ್ಟಣದ ಟಿಎಪಿಸಿಎಂಸಿ ಬಯಲು ಆವರಣದಲ್ಲಿ ಮಾನ್ವಿ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ನಡೆದ ಬೃಹತ್ ಹಿಂದೂ ಶೋಭಾಯಾತ್ರೆಯ ವೇದಿಕೆ ಕಾರ್ಯಕ್ರಮದಲ್ಲಿ ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಕಲ್ಮಠದ ಶ್ರೀ ವಿರೂಪಾಕ್ಷ ಪಂಡೀತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಾಚನ ನೀಡಿ ನಮ್ಮ ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿ ಸ್ವಾತಂತ್ರ ವನ್ನು ನೀಡಿದ ಮಹಾನಿಯರಿಗೆ ನಾವು ಗೌರವ ದೊರೆಯುವಂತೆ ನಾವು ಸ್ವತಂತ್ರ ದೇಶದಲ್ಲಿ ಬದುಕಬೇಕಾಗಿದೆ ಅದ್ದರೆ ನಾವೇ ಸ್ವತಃ ಭ್ರಷ್ಟರಾದಗ ರಾಷ್ಟ್ರವನ್ನು ನಿರ್ಮಾಣ ಮಾಡುವುದಾದರು ಹೇಗೆ ನಮ್ಮ ಅಮೂಲ್ಯವಾದ ಮತವನ್ನು ಹಣಕ್ಕಾಗಿ ಮಾರಿಕೊಂಡಲ್ಲಿ ಭ್ರಷ್ಟಚಾರವನ್ನು ನಿರ್ಮೂಲನೆ ಮಾಡುವುದಾದರು ಹೇಗೆ ವಿಶ್ವದಲ್ಲಿ ಬಲಿಷ್ಟ ರಾಷ್ಟ್ರವನ್ನು ಕಟ್ಟುವುದಾದರು ಹೇಗೆ ಅದ್ದರಿಂದ ಮೊದಲು ನಾವು ಸರಿಯಾಗ ಬೇಕಾದಲ್ಲಿ ಇಂದು ನಾವು ಮತವನ್ನು ಹಣ ಪಡೆಯದೆ ಅರ್ಹ ವ್ಯಕ್ತಿಗೆ ಮಾತ್ರ ಮತ ಹಾಕುತ್ತೇನೆ, ಲಂಚವನ್ನು ನೀಡದೆ ಸರ್ಕಾರಿ ಕಚೇರಿಗಳಲ್ಲಿ (**2ನೇ ಪುಟಕ್ಕೆ**>>>)

## ಮೊದಲನೇಯ ಪುಟದಿಂದ

# ಶಿಕ್ಷಣವು ಜೀವನವನ್ನ ಬದಲಾಯಿಸುವ ಅತ್ಯಂತ ಶಕ್ತಿಶಾಲಿ ಅಸ್ತ್ರ: ವಿನಯಕುಮಾರ ಗಣಾಚಾರಿ

**ಜ್ಯೂ. ಜೀನಿಯಸ್ ಅವಾರ್ಡ ಪಡೆದ ವಿದ್ಯಾರ್ಥಿಗಳು:** 5ನೇ ತರಗತಿ ಜ್ಯೂ. ಜೀನಿಯಸ್ ಅವಾರ್ಡನಲ್ಲಿ ಲಿಂಗಸೂಗುರಿನ ಎಕ್ಸಪರ್ಟ್ ಪಬ್ಲಿಕ್ ಶಾಲೆಯ ಮಲ್ಲಿಕಾರ್ಜುನ ಪ್ರಭುಗೌಡ ಪಾಟೀಲ (ಮೊದಲ ಬಹುಮಾನ), ಮರಂಗಂಟನಾಳ ಗ್ರಾಮದ ಸರಕಾರಿ ಹಿ.ಪ್ರಾ. ಶಾಲೆಯ ಅಭಿಷೇಕ ದೇವಣ್ಣ (ಎರಡನೇ ಬಹುಮಾನ), ಅಡವಿಭಾವಿಯ ಸರಕಾರಿ ಹಿ.ಪ್ರಾ. ಶಾಲೆಯ ವಿವೇಕ ಮಲ್ಲಿಕಾರ್ಜುನ (ಮೂರನೇ ಬಹುಮಾನ), ಹಟ್ಟಿ ಸೆಂಟ್ ಅನ್ನೆಸ್ ಶಾಲೆಯ ಶಾಶ್ವತ ಶರಣಬಸಪ್ಪ (ನಾಲ್ಕನೆ ಬಹುಮಾನ), ನಾಗಬೇನಾಳದ ಸರಕಾರಿ ಹಿ.ಪ್ರಾ. ಶಾಲೆಯ ಪ್ರವೀಣ್ ಯಮನಪ್ಪ ಐದನೇ ಬಹುಮಾನ ಪಡೆದರು.

ಇನ್ನೂ 7 ನೇ ತರಗತಿಯ ಜ್ಯೂ. ಜೀನಿಯಸ್ ಅವಾರ್ಡನಲ್ಲಿ ಹುನಗುಂದ ಆದರ್ಶ ವಿದ್ಯಾಲಯದ ಪ್ರಣೀತ ಬಸಾಪೂರ (ಮೊದಲನೆ ಬಹುಮಾನ), ಲಿಂಗಸುಗೂರು ಆದರ್ಶ ವಿದ್ಯಾಲಯದ ಅರುಂಧತಿ ಜಗದೀಶ (ಎರಡನೇ ಬಹುಮಾನ), ಲಿಂಗಸೂಗೂರು ಶ್ರೀ ಉಮಾಮಹೇಶ್ವರಿ ಇಂಟರ ನ್ಯಾಷನಲ್ ಶಾಲೆಯ ಭೂಮಿಕಾ ಮಲ್ಲಿಕಾರ್ಜುನ (ಮೂರನೇ ಬಹುಮಾನ), ಲಿಂಗಸೂಗೂರು ಶ್ರೀ ಉಮಾಮಹೇಶ್ವರಿ ಇಂಟರ ನ್ಯಾಷನಲ್ ಶಾಲೆಯ ಶ್ರಾವಣಿ ಅಮರೇಶ (ನಾಲ್ಕನೆ ಬಹುಮಾನ), ಹುನಗುಂದ ಆದರ್ಶ ವಿದ್ಯಾಲಯದ

ಮರಿಸ್ವಾಮಿ ಮಹಾಂತೇಶ (ಐದನೇ) ಬಹುಮಾನ ಪಡೆದರು. ವಿಜೇತರಿಗೆ ಸಂಸ್ಥೆಯು ನಗದು ಬಹುಮಾನ ಹಾಗೂ ಟ್ರೋಪಿ ನೀಡಿ ಗೌರವಿಸಲಾಯಿತು.

ಸಂಸ್ಥೆಯ ಆಡಳಿತ ಮಂಡಳಿಯ ಅಮರೇಶ ಗಣಾಚಾರಿ, ಮಲ್ಲಿಕಾರ್ಜುನ ಗಣಾಚಾರಿ, ಸಂಯೋಜಕ ಸಂಗಯ್ಯ ಸಿಂದಗಿಮಠ, ಪ್ರೌಢಶಾಲೆ ಮುಖ್ಯಗುರು ಆನಂದ ಹಿರೇಮಠ, ಮೊಹಮ್ಮದ ಪೈಗಂಬರ ಟೆಂಗುಂಟಿ, ಶರಣಬಸು ಹೂಗಾರ, ಮೌನೇಶ ಬಡಿಗೇರ, ರಾಜು ಹಾಗೂ ಬೋಧಕ ಬೋಧಕೇತರ ಸಿಬ್ಬಂದಿಗಳು ಇದ್ದರು.

# ಸ್ವಾತಂತ್ರ್ಯವನ್ನು ನೀಡಿದ ಮಹಾನಿಯರಿಗೆ ನಾವು ಗೌರವ ದೊರೆಯುವಂತೆ ಬದುಕನ್ನು ರೂಪಿಸಿಕೊಳ್ಳಿ:ಕಲ್ಮಠ ಶ್ರೀ

ನಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತೇವೆ,ನಾವು ಎಂದಿಗೂ ತೆರಿಗೆಯನ್ನು ವಂಚನೆ ಮಾಡುವುದಿಲ್ಲ ಪರಿಸರಕ್ಕೆ ಪ್ರತಿವರ್ಷ ಗಿಡಗಳನ್ನು ನೇಡುತ್ತೇನೆ ಸ್ವಾಭಿಮಾನ,ಧೈರ್ಯದಿಂದ ನಮ್ಮ ಹಿಂದೂ ಪರಂಪರೆಯ ಬಗ್ಗೆ ಹೆಮ್ಮೆ ಪಟ್ಟುಕೊಂಡು ,ದೇಶಕ್ಕಾಗಿ ನಾನೇನು ಕೋಡಬಲ್ಲೇ ಎನ್ನುವ ಅಸ್ಮಿತೆಯ ನಡುವೆ ನಾವು ನಮ್ಮ ಬದುಕನ್ನು ಕಟ್ಟಿಕೊಳ್ಳುತ್ತೇವೆ ಎನ್ನುವ ಸಂಕಲ್ಪವನ್ನು ಯುವ ಸಮುದಾಯ ಹೊಂದಿದಾಗ ಮಾತ್ರ ಭಾರತ ವಿಶ್ವಗುರುವಾಗುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಚೀಕಲಪರ್ವಿ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ಆರ್ಶೀವಾಚನ ನೀಡಿ ನಮ್ಮ ಹಿರಿಯರು ಪ್ರತಿಯೊಂದು ಹಬ್ಬ ,ಆಚರಣೆಗಳನ್ನು,ಉತ್ಸವಗಳನ್ನು ,ಜಾತ್ರೆಗಳನ್ನು ವೈಜ್ಞಾನಿಕ ಅಂಶಗಳನ್ನಿಟ್ಟು ಕೊಂಡು ರೂಪಿಸಿದ್ದಾರೆ ನಮ್ಮ ಹಿಂದೂ ಧರ್ಮದ ಆಚರಣೆಗಳು ಸಮಾಜದಲ್ಲಿ ಸೌಹಾರ್ಧತೆಮಭಾವೈಕ್ಯತೆಯನ್ನು ಮೂಡಿಸುತ್ತ ಬಂದಿವೇ ಅಧುನಿಕತೆಯ ಹೆಸರಿನಲ್ಲಿ ನಮ್ಮ ಆಚರಣೆಗಳ ಮಹಾತ್ವವನ್ನು ತಿಳಿಯದೆ ಟೀಕಿಸುವವರು ಮೋದಲು ನಮ್ಮ ಆಚರಣೆಗಳ ಮಹಾತ್ವ ಹಾಗೂ ಹಿನ್ನೆಲೆಗಳನ್ನು,ಉದ್ದೇಶಗಳನ್ನು ನಾವು ತಿಳಿಸಿಕೊಡಬೇಕಾಗಿದೆ. ನಮ್ಮ ದೇಶದ ಯಾವುದೇ ಭೂಮಿಯಲ್ಲಿ ಅಸಗೆದರು ಕೂಡ ನಮ್ಮಗೆ ಶಿವಲಿಂಗ ದೊರೆಯುವುದಕ್ಕೆ ನಮ್ಮ ಹಿರಿಯರ ಭಕ್ತಿ ,ಆಚರಣೆಗಳೆ ಕಾರಣ ಎಂದು ತಿಳಿಸಿದರು.

ಕರೆಗುಡ್ಡ ಶ್ರೀ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಅಮರೇಶ್ವರ ಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು, ಬಾಗಲವಾಡ ಶಿವಯ್ಯಸ್ವಾಮಿಗಳು,ಸುವರ್ಣಗಿರಿ ಮಠದ ಶಂಕರಯ್ಯಸ್ವಾಮಿಗಳು ಆರ್ಶೀವಾಚನ ನೀಡಿದರು. ಮಾನ್ವಿ ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷರಾದ ನೀಲಕಂಠಪ್ಪ ಮಾತನಾಡಿದರು.

ರಾಷ್ಟ್ರೀಯ ಸ್ವಯಂ ಸೇವ ಸಂಘದ ಜಿಲ್ಲಾ ಪ್ರ.ಕಾರ್ಯವಾಹರಾದ ರಾಜೇಂದ್ರ ಮುತ್ತಿನ ಗೌಡ ಹರವಿ ದಿಕ್ಸೂಚಿ ಭಾಷಣದಲ್ಲಿ ಮಾತನಾಡಿ ರಾಷ್ಟ್ರೀಯ ಸ್ವಯಂ ಸೇವ ಸಂಘವು ನೂರು ವರ್ಷಗಳಿಂದ ರಾಷ್ಟ್ರೀಯ ವಿಚಾರಗಳನ್ನು ಇಟ್ಟುಕೊಂಡು ತಮ್ಮ ಕಾರ್ಯಕರ್ತರ ಮೂಲಕ ದೇಶದ ಮನೆ ಮನೆಗೆ ನಮ್ಮ ರಾಷ್ಟ್ರೀಯತೆಯ ಬಗ್ಗೆ ಜಾಗೃತಿ ಮೂಡಿಸುವ ಹಾಗೂ ದೇಶದಲ್ಲಿ ಲಕ್ಷಕ್ಕೂ ಹೆಚ್ಚು ಹಿಂದೈ ಸಮವೇಶಗಳನ್ನು ಅಯೋಜಿಸುವಮೂಲಕ ರಾಷ್ಟ್ರ ಪ್ರೇಮವನ್ನು ಜಾಗೃತಗೊಳಿಸುತ್ತಿದೆ. ವಿಶ್ವಗುರುವಾಗುವುದಕ್ಕೆ ನಮ್ಮ ಭಾರತ ದೇಶದಿಂದ ಮಾತ್ರ ಸಾಧ್ಯ ಎಕೆಂದರೆ ಎರಡುಸಾವಿರ ವರ್ಷಗಳ ಪರಕಿಯರ ದಾಳಿಯ ನಂತರವು ನಮ್ಮ ಹಿಂದೂ ಧರ್ಮವನ್ನು,ಸನಾತನ ಪರಂಪರೆಯನ್ನು ಉಳಿಸಿಕೊಂಡು ಹೋಗುವುದಕ್ಕೆ ಹಿಂದೂಗಳಿಂದ ಮಾತ್ರ ಸಾಧ್ಯವಾಗಿದೆ. ವಿಶ್ವವೇ ಇಂದು ನಮ್ಮ ಪರಂಪರೆಯನ್ನು ಗೌರವಿಸುತ್ತಿದೆ. ವಿಶ್ವದ ಎಲ್ಲ ಸಮುದಾಯಗಳನ್ನು ಪ್ರೀತಿಸುವ ,ಆಶ್ರಯವನ್ನು ನೀಡುವ ಹಿಂದೂಗಳ ಪರಿಸ್ಥಿತಿ ವಿದೇಶಗಳಲ್ಲಿ ಶೋಚನಿಯವಾಗಿದೆ. ಅದ್ದರಿಂದ ನಾವೆಲ್ಲ ಒಂದು ನಾವೆಲ್ಲ ಹಿಂದೂ, ಎಂದಾಗ ಮಾತ್ರ ನಮ್ಮ ಹಿಂದೂ ಧರ್ಮ ಉಳಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

# ರಾಯಚೂರು ಉತ್ಸವದ ಅದ್ಭುತ ಮಕ್ಕಳ ಹಬ್ಬಕ್ಕೆ ಅದ್ಧೂರಿ ಚಾಲನೆ

ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಮಾತನಾಡಿ, ಮಕ್ಕಳು ಈ ಲೋಕದ ಆಸ್ತಿ. ಮಕ್ಕಳನ್ನು ರಂಜಿಸಲು, ಅವರ ಸ್ಮೃತಿಪಟಲದಲ್ಲಿ ಉಳಿಯುವಂತಹ ಕಾರ್ಯಕ್ರಮಕ್ಕೆ ಈ ಮಕ್ಕಳ ಹಬ್ಬ ಆಯೋಜಿಸಲಾಗಿದೆ ಎಂದು ತಿಳಿಸಿದರು.
ರೇಸ್ ಕಾನ್ಸೆಪ್ಟ್ ಶಾಲೆಯ ತನ್ವಿ ನಾಯಕ ಅವರ ಗೀತೆಯ ಮೂಲಕ ಮಕ್ಕಳ ಹಬ್ಬದ ಕಾರ್ಯಕ್ರಮ ಆರಂಭಗೊಂಡಿತು.
ಡಿ.ಸಿ., ಸಿಇಓ, ಪಾಲಿಕೆ ಆಯುಕ್ತರಿಂದ ಹಬ್ಬದ ವೀಕ್ಷಣೆ: ಕಾರ್ಯದೊತ್ತಡದ ಮಧ್ಯೆಯೂ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ ಮತ್ತು ಮಹಾನಗರ ಪಾಲಿಕೆಯ ಅಧಿಕಾರಿಗಳು ವೇದಿಕೆ ಎದುರುಗಡೆ ಕುಳಿತು ಮಕ್ಕಳ ಕಾರ್ಯಕ್ರಮದ ವೀಕ್ಷಣೆ ನಡೆಸಿದರು. ಕೋಳಿ ನೃತ್ಯಕ್ಕೆ ಕಿರುಚಿದ ಮಕ್ಕಳು: ಖ್ಯಾತ ಕಲಾವಿದ ಅಶೋಕ ಕೊಳಲಿ ಅವರು ಪ್ರಸ್ತುತಪಡಿಸಿದ ಕೋಳಿ ನೃತ್ಯಕ್ಕೆ ಮಕ್ಕಳು ಜೋರಾಗಿ ಕಿರುಚಿ ಸಂತಷ ವ್ಯಕ್ತಪಡಿಸಿದರು.
ಕುದ್ರೋಳಿ ಗಣೇಶರ ಜಾದೂಗೆ ಮರುಳಾದ ಮಕ್ಕಳು: ಸಮಾರಂಭದಲ್ಲಿ ಮಕ್ಕಳು ಮರಳಾಗುವಂತೆ ಮಾಡಿದ್ದು ಕುದ್ರೋಳಿ ಗಣೇಶ ಅವರ ಜಾದೂ. ತಮ್ಮ ಕೈಚಳಕದಿಂದ ಬಗೆಬಗೆಯ ಜಾದೂ ಮಾಡುತ್ತಿದ್ದಂತೆ ಮಕ್ಕಳು ಚಪ್ಪಾಳೆ ತಟ್ಟಿದರು.
ಡೊಳ್ಳು ಭಾರಿಸಿದ ಅಪರ ಜಿಲ್ಲಾಧಿಕಾರಿಗಳು: ಮಕ್ಕಳ ಹಬ್ಬದಲ್ಲಿ ಭಾಗಿಯಾಗಿದ್ದ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಡೊಳ್ಳು ಭಾರಿಸಿ ಮಕ್ಕಳ ಸಂತಷದಲ್ಲಿ ಭಾಗಿಯಾದರು.
ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ, ತಹಸೀಲ್ದಾರ ಸುರೇಶ ವರ್ಮಾ, ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರಾದ ಕೇಶವರಾವ್ ರೆಡ್ಡಿ, ಕಾರ್ಯದರ್ಶಿಗಳಾದ ಮುರಳೀಧರ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಜಿಲ್ಲಾ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾವಂತಗೇರಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಸಿಂಧೂ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿ ಈರಣ್ಣ ಕೋಸಗಿ ಸೇರಿದಂತೆ ಇತರರ ಇದ್ದರು. ವೈ.ಕೆ.ಯಶೋಧಾ ಅವರು ನಿರೂಪಿಸಿದರು.

## ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವರಾಗಿ ಬಡ್ತಿಯಾದ ಡಾ. ಲಕ್ಷ್ಮಿ ಪಾಟೀಲ್ ಮಾಕಾ

**ಕಲಬುರಗಿ;ಫೆ.2:** ಶರಣಬಸವ ವಿಶ್ವವಿದ್ಯಾಲಯದ ಹಾಲಿ ಕುಲಸಚಿವರಾದ ಡಾ. ಎಸ್. ಜಿ. ಡೊಳ್ಳೇಗೌಡರ್ ವೈಯಕ್ತಿಕ ಕಾರಣಗಳಿಂದಾಗಿ ರಾಜೀನಾಮೆ ಸಲ್ಲಿಸಿದ ನಂತರ ತಕ್ಷಣದಿಂದ ಜಾರಿಗೆ ಬರುವಂತೆ, ಶರಣಬಸವ ವಿಶ್ವವಿದ್ಯಾಲಯದ ಡೀನ್ ಹಾಗೂ ಗೋದುತಾಯಿ ಮಹಿಳಾ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದ ಮುಖ್ಯಸ್ಥರೂ ಆಗಿರುವ ಡಾ. ಲಕ್ಷ್ಮಿ ಪಾಟೀಲ್ ಮಾಕಾ ಅವರನ್ನು ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವರಾಗಿ ಬಡ್ತಿ ನೀಡಲಾಗಿದೆ.

ವಿಶ್ವವಿದ್ಯಾಲಯದಲ್ಲಿ ಸಮರ್ಥ ಆಡಳಿತಾಧಿಕಾರಿಯಾಗಿ ಗುರುತಿಸಿಕೊಂಡಿರುವ ಡಾ. ಲಕ್ಷ್ಮಿ ಪಾಟೀಲ್ ಮಾಕಾ ಅವರು ವಿಶ್ವವಿದ್ಯಾಲಯದ ಕುಲಸಚಿವರಾಗಿ ಅಧಿಕಾರ ವಹಿಸಿಕೊಂಡು ಶರಣಬಸವೇಶ್ವರ ದೇವಾಲಯದಲ್ಲಿ ಸಂತ ಶರಣಬಸವೇಶ್ವರರಿಗೆ ನಮನ ಸಲ್ಲಿಸಿದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ಮತ್ತು ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರ ಆಶೀರ್ವಾದ ಪಡೆದು, ಸಂಘದ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ದೇಶಮುಖ ಅವರ ಆಶೀರ್ವಾದವನ್ನು ಪಡೆದರು.ಡಾ. ಮಾಕಾ ವಿಶ್ವವಿದ್ಯಾಲಯದ ಅತ್ಯಂತ ಕಿರಿಯ ಕುಲಸಚಿವರಾಗಿದ್ದು, ವಿಶ್ವವಿದ್ಯಾಲಯವು ತನ್ನ ಶೈಕ್ಷಣಿಕ ಶ್ರೇಷ್ಠತೆ ಮತ್ತು ಸಂಶೋಧನಾ ಕಾರ್ಯಗಳೊಂದಿಗೆ ರಾಜ್ಯದಲ್ಲಿ ಉದಯೋನ್ಮುಖ ವಿಶ್ವವಿದ್ಯಾಲಯವಾಗಿ ರೂಪುಗೊಳ್ಳುತ್ತಿರುವ ನಿರ್ಣಾಯಕ ಸಮಯದಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ. ಸಂಸ್ಥಾನದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ, ಪೂಜ್ಯ ದೊಡ್ಡಪ್ಪ ಅಪ್ಪಾಜಿ, ಶ್ರೀ ಬಸವರಾಜ ದೇಶಮುಖ, ವಿವಿಯ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ನಿರ್ದೇಶಕ ಪ್ರೊ ವಿ. ಡಿ. ಮೈತ್ರಿ ಸೇರಿದಂತೆ ಇತರ ಗಣ್ಯರು ಡಾ. ಲಕ್ಷ್ಮಿ ಪಾಟೀಲ್ ಮಾಕಾ ಅವರನ್ನು ವಿಶ್ವವಿದ್ಯಾಲಯದಲ್ಲಿ ಹೊಸ ಜವಾಬ್ದಾರಿ ವಹಿಸಿಕೊಂಡಿದ್ದಕ್ಕಾಗಿ ಅಭಿನಂದಿಸಿದರು.

# ಮಹಾ ನಗರ ಪಾಲಿಕೆ ಸೂಪರ್ ಸೀಡ್ ಗೆ ಇಬ್ರಾಹಿಂ ಬಾಬು ಆಗ್ರಹ



**ಬಳ್ಳಾರಿ, ಫೆ.02:** ಇಲ್ಲಿನ ಮಹಾನಗರ ಪಾಲಿಕೆ ಕಳೆದ 9 ತಿಂಗಳಿಂದ ಸಾಮಾನ್ಯ ಸಭೆಯನ್ನೇ ನಡೆಸಿಲ್ಲ, ತನ್ನ ಕರ್ತವ್ಯವನ್ನು ಮರೆತ ಈ ಪಾಲಿಕೆಯನ್ನು ಸರ್ಕಾರ ಕೂಡಲೇ ಸೂಪರ್ ಸೀಡ್ ಮಾಡಬೇಕು ಎಂದು ಪಾಲಿಕೆ ಸದಸ್ಯ ಸಿ.ಇಬ್ರಾಹಿಂ ಬಾಬು ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು. ಯಾವುದೇ ಪಾಲಿಕೆ 6 ತಿಂಗಳಲ್ಲಿ ಸಾಮಾನ್ಯ ಸಭೆ ನಡೆಸದೇ ಹೋದರೆ, ಅಂತಹ ಪಾಲಿಕೆಯನ್ನು ಸೂಪರ್ ಸೀಡ್ ಮಾಡಲು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ-1976ರ ಕಾಯ್ದೆ ಅಡಿ ಸರ್ಕಾರಕ್ಕೆ ಅಧಿಕಾರವಿದೆ. ಜನರ ಹಿತ ಮರೆತಿರುವ ಪಾಲಿಕೆಯ ಆಡಳಿತವನ್ನು ಸರ್ಕಾರ ಸೂಪರ್ ಸೀಡ್ ಮಾಡಿ, ಹೊಸ ಆಡಳಿತಕ್ಕೆ ಚುನಾವಣೆ ನಡೆಸಲು ಅವಕಾಶ ಮಾಡಿಕೊಡಬೇಕು. 2025-26ರ ಬಜೆಟ್ ಮಂಡನೆ ವೇಳೆ ನಡೆದ ಸಾಮಾನ್ಯ ಸಭೆಯೇ ಕೊನೆ. ಅಲ್ಲಿಂದ ಇಲ್ಲಿಯ ವರೆಗೆ ಯಾವುದೇ ಸಾಮಾನ್ಯ ಸಭೆಗಳು ಪಾಲಿಕೆಯಲ್ಲಿ ನಡೆದಿಲ್ಲ. ಹೀಗಾಗಿ ಇದು ಕೇವಲ ಅಧಿಕಾರಿಗಳ ಆಡಳಿತವಿರುವ ಪಾಲಿಕೆಯೋ ಅಥವಾ ಚುನಾಯಿತ ಜನಪ್ರತಿನಿಧಿಗಳು ಇದ್ದಾರೋ ಇಲ್ಲವೋ ಎಂಬ ಪ್ರಶ್ನೆ ಎದುರಾಗಿದೆ.

ಸಾಮಾನ್ಯ ಸಭೆ ನಡೆಸದೇ, ನಗರದ ಸಮಸ್ಯೆಗಳ ಕುರಿತು ಚರ್ಚೆ ಮಾಡದೇ, ಪಾಲಿಕೆಯನ್ನು ಹೀಗೆ ನಡೆಸಿದರೆ ಚುನಾಯಿತ ಕಾರ್ಪೊರೇಟರ್ಗಳು ತಮ್ಮ ವಾರ್ಡ್ಗಳ ನಾಗರಿಕರ ಸಮಸ್ಯೆಗಳ ಪರಿಹಾರಕ್ಕೆ ಏನು ಉತ್ತರ ನೀಡಬೇಕು ಎಂಬುದೇ ತಿಳಿಯದಾಗಿದೆ. ಜನರಿಗೆ ಅನುಕೂಲವಾಗಲಿ ಎಂದೇ ಸ್ಥಳೀಯ ಸಂಸ್ಥೆಗಳನ್ನು ಸಂವಿಧಾನದ ಆಶಯದಂತೆ ರಚಿಸಿದೆ. ಆದರೆ ಬಳ್ಳಾರಿಯಲ್ಲಿ ಸಂವಿಧಾನದ ಆಶಯಗಳಿಗೇ ಧಕ್ಕೆಯಾಗಿದೆ. ಚುನಾಯಿತ ಪ್ರತಿನಿಧಿಗಳಿದ್ದು, ಜನರ ಸಮಸ್ಯೆ ಚರ್ಚಿಸಲು ಒಂದು ಕಡೆ ಸಭೆ ಸೇರಿಸಲೂ ಆಗದ ಈ ಪರಿಸ್ಥಿತಿಯು ಜನ ವಿರೋಧಿ, ಅಷ್ಟೇ ಅಲ್ಲ, ಇದು ಪ್ರಜಾಪ್ರಭುತ್ವದ ಕಗ್ಗೊಲೆಯೂ ಹೌದು,

ಬಳ್ಳಾರಿ ಮಹಾನಗರ ಪಾಲಿಕೆ ಜನರ ಬಗ್ಗೆ ಇಷ್ಟು ನಿರ್ಲಕ್ಷ್ಯ ತಾಳಲು, ಬಳ್ಳಾರಿ ನಗರದ ಶಾಸಕ ನಾರಾ ಭರತ್ ರೆಡ್ಡಿ ಮತ್ತು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಅವರ ನಿರ್ಲಕ್ಷ್ಯವೂ ಎದ್ದು ಕಾಣುತ್ತಿದೆ.
ಬಳ್ಳಾರಿ ನಗರ ಪಾಲಿಕೆಯ ಈಗಿನ ಸ್ಥಿತಿಯನ್ನು ಗಮನಿಸುತ್ತಿದ್ದರೆ 'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ' ಎಂಬ ಬಸವಣ್ಣನರವರ ವಚನವೊಂದು ನೆನಪಾಗುತ್ತಿದೆ. ಬಳ್ಳಾರಿ ಮಹಾನಗರ ಪಾಲಿಕೆಯನ್ನು ಹೇಳುವವರು ಕೇಳುವವರು ಇಲ್ಲ ಎಂಬಂತಾಗಿದೆ.

ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿ ಸ್ಥಾನ ಒಲಿದಿದ್ದೇ ಬಳ್ಳಾರಿಯ ಕಾರಣಕ್ಕೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಅವರಿಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ, ನಗರಾಭಿವೃದ್ಧಿ ಸಚಿವರಿಗೆ ಇಲ್ಲಿನ ಪಾಲಿಕೆ ಮತ್ತು ಆಡಳಿತದ ರೀತಿ ತಿಳಿಯದೇ ಇರುವುದು ಅಚ್ಚರಿಯ ಸಂಗತಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕೂಡಲೇ ಇಲ್ಲಿನ ಆಡಳಿತಕ್ಕೆ ಚಾಟಿ ಬೀಸಿ ಸರಿದಾರಿಗೆ ತರಬೇಕು. ಇಲ್ಲವೇ ಸೂಪರ್ ಸೀಡ್ ಮಾಡಿ ಹೊಸ ಆಡಳಿತ ಬರುವಂತೆ ಮಾಡಬೇಕು ಎಂದಿದ್ದಾರೆ.

# ಆರ್ಥಿಕತೆಗೆ ವೇಗ ನೀಡುವ ಬಜೆಟ್



**ಬೀದರ್:ಫೆ.2:** ಕೇಂದ್ರದ ಬಜೆಟ್ ದೇಶದ ಆರ್ಥಿಕತೆಗೆ ಮತ್ತಷ್ಟು ವೇಗ ನೀಡುವ ಹಾಗೂ ಸರ್ವರ ಹಿತದಿಂದ ಕೂಡಿದೆ. ಮೇಕ್ ಇನ್ ಇಂಡಿಯಾಗೆ ಆದ್ಯತೆ ಮುಖಾಂತರ ಆತ್ಮನಿರ್ಭರ ಭಾರತಕ್ಕೆ ಒತ್ತು ನೀಡಲಾಗಿದೆ. ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಧ್ಯೇಯದೊಂದಿಗೆ ಸಬ್ ಕಾ ವಿಶ್ವಾಸ್ ಗಳಿಸುವ ಬಜೆಟ್ ಇದಾಗಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ, ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನೇತೃತ್ವ ಮತ್ತು ವಿಕಸಿತ, ವಿಶ್ವಗುರು ಭಾರತ ನಿರ್ಮಾಣದ ಅವರ ದೂರದೃಷ್ಟಿತ್ವದಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್ ದೇಶದ ಅರ್ಥ ಕ್ರಾಂತಿಗೆ ಹೊಸ ಮುನ್ನುಡಿ ಬರೆಯುವ ಅಂಶಗಳನ್ನು ಹೊಂದಿದೆ. ಬಡವರು, ಯುವಕರು, ರೈತರು, ಹಿಂದುಳಿದವರು ಹಾಗೂ ಮಹಿಳೆಯರಿಗೆ ಶಕ್ತಿ ತುಂಬಲು ಒತ್ತು ನೀಡಲಾಗಿದೆ. ಪ್ರತಿ ಜಿಲ್ಲೆಯಲ್ಲಿ ವಿದ್ಯಾರ್ಥಿನಿಯರಿಗೆ ಒಂದು ವಸತಿ ನಿಲಯ ಸ್ಥಾಪನೆ ಮಹತ್ವದ ಕ್ರಮವಾಗಿದೆ. ತಂತ್ರಜ್ಞಾನದಲ್ಲಿ ಸ್ವದೇಶಿ ಬಳಕೆಯತ್ತ ಚಿತ್ತ ಹರಿಸಲಾಗಿದೆ. ಪರಮಾಣು ಶಕ್ತಿ ಯೋಜನೆ ಮೂಲಕ ಬರುವ ದಶಕದಲ್ಲಿ ರಕ್ಷಣೆ ಸೇರಿ ವಿವಿಧ ಕ್ಷೇತ್ರಗಳ ಬಲವರ್ಧನೆಗೆ ಯೋಜನೆ ಹಾಕಿಕೊಂಡಿರುವುದು ವಿಶೇಷ ಎಂದು ಬಣ್ಣಿಸಿದ್ದಾರೆ.

ಜನಾರೋಗ್ಯ ಕಾಳಜಿಗೆ ಹೆಚ್ಚು ಗಮನ ನೀಡಲಾಗಿದೆ. ಕ್ಯಾನ್ಸರ್, ಶುಗರ್ ಸೇರಿ ವಿವಿಧ 17 ಕಾಯಿಲೆಗಳ ಔಷಧಿ ಬೆಲೆ ಕಮ್ಮಿ ಮಾಡಲಾಗಿದೆ. ಹೊಸ ಹೈಸ್ಪೀಡ್ ರೈಲು ಮಾರ್ಗಗಳು ಸ್ಥಾಪಿಸಲಾಗುತ್ತಿದ್ದು, ಹೈದರಾಬಾದ್-ಬೆಂಗಳೂರು ಮಾರ್ಗ ಸೇರಿಸಿರುವುದು ನಮ್ಮ ಭಾಗದವರಿಗೆ ಅನುಕೂಲ ಕಲ್ಪಿಸಲಿದೆ. ಕೃಷಿ, ಉದ್ಯಮ, ಶಿಕ್ಷಣ, ರಕ್ಷಣೆ, ಐಟಿ-ಬಿಟಿ, ನಗರ-ಗ್ರಾಮೀಣ ಅಭಿವೃದ್ಧಿ ಹೀಗೆ ಎಲ್ಲ ವರ್ಗದವರ ಹಿತಕ್ಕೆ ಪೂರಕ ಬಜೆಟ್ ಇದಾಗಿದೆ. ಬಲಿಷ್ಠ ಭಾರತಕ್ಕಾಗಿ ಕೇಂದ್ರ ಸರ್ಕಾರ ಹೊಂದಿರುವ ವಿಜನ್ ಈ ಬಜೆಟ್ ನಲ್ಲಿ ಕಾಣಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಯಾವ ಕ್ಷೇತ್ರಕ್ಕೆ ಬಿಡದೆ ಹಲವಾರು ಮಹತ್ವದ ಜನಪರ ಯೋಜನೆಗಳ ಘೋಷಣೆ ಮುಖಾಂತರ ದೇಶದ ಜನರ ಮನ ಗೆಲ್ಲುವ ಜೊತೆಗೆ ಅಭಿವೃದ್ಧಿಯಲ್ಲಿ ಹೊಸ ಭರವಸೆ ಮೂಡಿಸಲಾಗಿದೆ. ವಿಶ್ವ ಗುರು, ವಿಕಸಿತ ಹಾಗೂ ಸರ್ವೆಜನಾ ಸುಖಿನೋ ಭವಂತು ಪರಿಕಲ್ಪನೆಯಲ್ಲಿ ಬಂಪರ್ ಬಜೆಟ್ ಕೊಟ್ಟಿರುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುವುದಾಗಿ ಡಾ.ಬೆಲ್ದಾಳೆ ಹೇಳಿದ್ದಾರೆ.

# ಕಾಂಗ್ರೆಸ್ ಪಕ್ಷ ಬಡವರಿಗೆ ಪಂಚ ಗ್ಯಾರೆಂಟಿ ಕೊಟ್ಟು ಎಲ್ಲ ಜನಾಂಗದವರ ಪ್ರೀತಿಗೆ ಪಾತ್ರ: ಟಿ. ಸುದಾಮ



**ಯಾದಗಿರಿ:ಫೆ.2:** ಕಾಂಗ್ರೆಸ್ ಪಕ್ಷ ಬಡವರಿಗೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಎಲ್ಲಾ ಜನಾಂಗದ ಪ್ರೀತಿಗೆ ಪಾತ್ರವಾಗಿದೆ. ಕಾಂಗ್ರೆಸ್ ಸರಕಾರ ದುರ್ಬಲರ, ಬಡವರ, ಕಾರ್ಮಿಕರ, ಮಹಿಳೆಯರ ಹಾಗೂ ರೈತರ ಪರವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗ ರಾಜ್ಯ ಉಪಾಧ್ಯಕ್ಷರೂ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಟಿ.ಸುದಾಮ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ (ಎಸ್.ಸಿ) ಘಟಕದ ಜಿಲ್ಲಾ ಪದಾಧಿಕಾರಿಗಳ ಹಾಗೂ ಬ್ಲಾಕ್ ಅಧ್ಯಕ್ಷರುಗಳ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ನಮ್ಮೆಲ್ಲರಿಗೆ ಉಸಿರಾಡಲು ಅವಕಾಶ ಮಾಡಿಕೊಟ್ಟಿದೆ ಎಂದು ಹೇಳಿದರು.ಆದ್ದರಿಂದ ಪಕ್ಷವನ್ನು ಬೂತ್ ಮಟ್ಟದಿಂದ ಕಟ್ಟಬೇಕೆಂದು ಸಲಹೆ ನೀಡಿದರು.
ಡಿಸಿಸಿ ಎಸ್.ಸಿ ಘಟಕದ ಜಿಲ್ಲಾದ್ಯಕ್ಷ ನೀಲಕಂಠ ಬಡಿಗೇರ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಂಗ್ರೆಸ್ ಪಕ್ಷ ಹಾಗೂ ಸರಕಾರ ಮಾತ್ರ ಪರಿಶಿಷ್ಟರಿಗೆ ಮತ್ತು ಹಿಂದುಳಿದ ಅಲ್ಪಸಂಖ್ಯಾತರು ಹಾಗೂ ಮುಂದುವರಿದ ಜನಾಂಗಕ್ಕೆ ಸರಿಸಮಾನವಾಗಿ ತೆಗೆದುಕೊಂಡು ಹೋಗುತ್ತದೆ.
ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಹಾಗೂ ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ ರಾಜ್ಯದ ಜನತೆಗೆ ಸಾಮಾಜಿಕ ನ್ಯಾಯವನ್ನು ಕೊಟ್ಟಿದ್ದಾರೆ ಎಂದು ಹೇಳಿದರು.
ಹಿರಿಯ ಮುಖಂಡರಾದ ಮಲ್ಲಣ್ಣ ದಾಸನಕೇರಿ, ಜಿಲ್ಲಾ ವಕ್ತಾರರಾದ ಹಣಮಂತ ಲಿಂಗೇರಿ, ಕಾಶಪ್ಪ ಚಿನ್ನಾಕಾರ, ಭಾಸ್ಕರ ರಾಮಸಮುದ್ರ, ವಿರುಪಾಕ್ಷಿ ಕೆಂಭಾವಿ, ಮರೆಪ್ಪ ಸುರಪುರ, ದೊಡ್ಡಪ್ಪ ಹುಂಡೇಕಲ್, ಭೀಮರಾಯ ಕಾಂಗ್ರೆಸ್, ಮುಖಂಡರಾದ ಸಾಯಬಣ್ಣ ಕಾವಲಿ, ಚಂದ್ರಕಾಂತ ಮಾಸ್ಟರ್, ಮರೆಪ್ಪ ಮಲ್ಲಾ(ಬಿ), ಧರ್ಮಣ್ಣ ಬಡಿಗೇರ ಪರಶುರಾಮ ಚಲವಾದಿ ಮುಂತಾದವರು ಭಾಗವಹಿಸಿದ್ದರು.

ವೀರಭದ್ರಪ್ಪ ಯಡ್ಡಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬ್ಲಾಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಈಟೆ ನಿರೂಪಿಸಿದರು, ವಿರುಪಾಕ್ಷಿ ಕೆಂಭಾವಿ ವಂದನಾರ್ಪಣೆ ಮಾಡಿದರು ಎಂದು ಯಾದಗಿರಿ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಠ ಜಾತಿ ವಿಭಾಗದ ಅಧ್ಯಕ್ಷರಾದ ನೀಲಕಂಠ ಬಡಿಗೇರ ವಕ್ತಾರ ಹಣಮಂತ ಲಿಂಗೇರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಯುವ ಮಾರ್ಗ

www.yuvamarga.com Yuva Marga yuva_marga_

# ರಾಯ್ ಆತ್ಮಹತ್ಯೆ: ನ್ಯಾಯಾಂಗ ತನಿಖೆಗೆ ಪಿಣರಾಯಿ ಆಗ್ರಹ ಕೇಂದ್ರಕ್ಕೆ ಪತ್ರ

**ತಿರುವನಂತಪುರಂ,ಫೆ.2–**ಆದಾಯ ತೆರಿಗೆ(ಐಟಿ) ಅಧಿಕಾರಿಗಳ ಪರಿಶೀಲನೆ ವೇಳೆ ಆತ್ಮಹತ್ಯೆಗೆ ಒಳಗಾದ ರಿಯಲ್ ಎಸ್ಟೇಟ್ ಉದ್ಯಮಿ ಸಿಜೆ ರಾಯ್ ಸಾವಿನ ಕುರಿತು ನ್ಯಾಯಾಂಗ ತನಿಖೆಗೆ ಕೋರಿ ಕೇರಳ ಸಿಎಂ ಪಿಣರಾಯಿ ವಿಜಯನ್ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಕೇಂದ್ರ ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿರುವ ಅವರು, ಈ ಘಟನೆ ಒಂದು ಕಪ್ಪು ಚುಕ್ಕೆಯಾಗಿದ್ದು, ಶೋಧ ಕಾರ್ಯಾಚರಣೆಯಲ್ಲಿ ಗಂಭೀರ ಲೋಪಗಳಿವೆ ಎಂದು ತಿಳಿಸಿದ್ದಾರೆ.

ರಾಯ್ ಅವರ ಸಹೋದರ ಕೂಡ ಐಟಿ ಅಧಿಕಾರಿಗಳಿಂದ ಕಿರುಕುಳ ಆಗಿರುವ ಕುರಿತು ಆರೋಪಿಸಿದ್ದಾರೆ. ನನ್ನ ಸಹೋದರ ಎಲ್ಲಾ ದಾಖಲೆಗಳನ್ನು ನೀಡಿ ಸಹಕಾರ ನೀಡಿದ್ದರು. ಆದರೂ ಅಧಿಕಾರಿಗಳು ಮರಳಿ ಶೋಧ ಕಾರ್ಯ ನಡೆಸುತ್ತಿದ್ದರು. ಐಟಿ ಅಧಿಕಾರಿಗಳ ದಾಳಿಯು ಅಸಹನೀಯವಾಗಿದೆ ಎಂದು ಹೇಳಿದ್ದರು ಎಂಬುದನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.ತೆರಿಗೆ ವಂಚನೆ ಗಂಭೀರ ಸಮಸ್ಯೆಯಾಗಿದ್ದು, ಅದನ್ನು ನಿಗ್ರಹಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕಿದೆ. ರಾಯ್ ಪ್ರಕರಣದಲ್ಲಿ ಸಂಭವಿಸಿದಂತೆ ಜೀವ ಹಾನಿಯಾಗುವ ಯಾವುದೇ ಕ್ರಮವನ್ನು ನಾಗರಿಕ ಪ್ರಜಾಪ್ರಭುತ್ವದಲ್ಲಿ ಸಮರ್ಥಿಸಲು ಸಾಧ್ಯವಿಲ್ಲ ಎಂದು ಕೇರಳ ಸಿಎಂ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಆದಾಯ ತೆರಿಗೆ ಅಧಿಕಾರಿಗಳ ಶೋಧ ಕಾರ್ಯಾಚರಣೆ ಸಂದರ್ಭದಲ್ಲಿ ಅದೇ ಸ್ಥಳದಲ್ಲಿ ವ್ಯಕ್ತಿಯೊಬ್ಬರು ಬಂದೂಕಿನಿಂದ ಆತ್ಮಹತ್ಯೆಗೆ ಒಳಗಾಗುವುದು ಅಚ್ಚರಿಯಾಗಿದೆ. ಇಂತಹ ಕಾರ್ಯಾಚರಣೆ ಸಂದರ್ಭದಲ್ಲಿ ತೆರಿಗೆ ಅಧಿಕಾರಿಗಳ ನಿಯಂತ್ರಣದಲ್ಲಿ ಆ ಸ್ಥಳ ಇರಬೇಕು. ಅಧಿಕಾರಿಗಳ ಈ ಕಾರ್ಯಾಚರಣೆ ಸುಗಮವಾಗಿ ನಡೆಸಬೇಕು ಎಂಬುದು ಅವರ ಕನಿಷ್ಠ ಜವಾಬ್ದಾರಿಯಾಗಿದೆ ಎಂದು ತಿಳಿಸಿದ್ದಾರೆ. ಈ ಕಾರ್ಯಾಚರಣೆ ವೇಳೆ, ಶೋಧನೆಗೆ ಒಳಗಾಗುತ್ತಿರುವ ವ್ಯಕ್ತಿಯ ಕೆಲವು ಹಕ್ಕುಗಳನ್ನು ರಕ್ಷಿಸಬೇಕಿದೆ. ಅದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಇದನ್ನು ಅವರು ಪೂರೈಸಬೇಕಿದೆ. ತೆರಿಗೆ ಎಂಬುದು ನಾಗರಿಕರು ಪಾವತಿಸುವ ಬೆಲೆ ಎಂದು ಹೇಳಲಾಗುತ್ತದೆ. ಆದ್ದರಿಂದ ತೆರಿಗೆ ವಂಚನೆಗೆ ಶೂನ್ಯ ಸಹಿಷ್ಣುತೆ ಇರಬೇಕು ಎಂದು ಅವರು ಇದೇ ವೇಳೆ ಒತ್ತಾಯಿಸಿದ್ದಾರೆ. ನ್ಯಾಯಾಲಯದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳ ನೇತೃತ್ವದ ವಿಚಾರಣಾ ಆಯೋಗವನ್ನು ರಚಿಸುವ ಮೂಲಕ ಈ ವಿಷಯದ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಕೇಂದ್ರ ಹಣಕಾಸು ಸಚಿವರಿಗೆ ಫೆ.1ರ ದಿನಾಂಕದಂದು ಕೇರಳ ಸಿಎಂ ಪತ್ರ ಬರೆದಿದ್ದಾರೆ. ಜ. 30ರಂದು ಬೆಂಗಳೂರಿನ ರಿಚ್ಮಂಡ್ ವೃತ್ತದ ಬಳಿಯಿರುವ ತಮ್ಮ ಕಚೇರಿಯಲ್ಲಿ 57ವರ್ಷದ ರಾಯ್, ಐಟಿ ದಾಳಿ ಸಮಯದಲ್ಲಿ ಲೈಸೆನ್ಸ್ ಬಂದೂಕಿನಿಂದ ಶೂಟ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.



# ವಿಪಕ್ಷಗಳ ಅಂಕುಶಕ್ಕೆ ದ್ವೇಷ ಭಾಷಣ ಕಾಯ್ದೆ : ಬಿವೈವಿ ಕಿಡಿ

**ಶಿವಮೊಗ್ಗ.ಫೆ2–**ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಚರ್ಚೆಗೂ ಅವಕಾಶ ನೀಡದೇ ಆತುರಾತುರವಾಗಿ ದ್ವೇಷ ಭಾಷಣ ಮಸೂದೆಯನ್ನು ಸರಕಾರ ಮಂಜೂರು ಮಾಡಿಸಿತ್ತು. ಈ ಕಾಯ್ದೆ ವಿಪಕ್ಷವನ್ನು ಮಟ್ಟ ಹಾಕಲು ತಂದ ಕಾಯ್ದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಆಕ್ಷೇಪಿಸಿದ್ದಾರೆ.

ಮಾಧ್ಯಮಗಳ ಜೊತೆ ಇಂದು ಮಾತನಾಡಿದ ಅವರು ಮಾನ್ಯ ರಾಜ್ಯಪಾಲರು ಮಸೂದೆಗೆ ಅಂಕಿತ ಹಾಕದಿರುವ ಕುರಿತು ಪ್ರಶ್ನೆಗೆ ಉತ್ತರ ಕೊಟ್ಟರು. ಈ ಮಸೂದೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಪರಿಣಾಮವಾಗಿ ತರೀಕೆರೆಯಲ್ಲಿ ನಮ್ಮ ಹಿಂದೂ ಕಾರ್ಯಕರ್ತ ವಿಕಾಸ್ ಪುತ್ತೂರು ಭಾಷಣವನ್ನೇ ಆರಂಭಿಸಿರಲಿಲ್ಲ; ಅಲ್ಲಿ ಪೊಲೀಸ್ ಅಧಿಕಾರಿಗಳು ಹೋಗಿ ನೋಟಿಸ್ ಕೊಟ್ಟು, ನೀವೇನಾದರೂ ಮಾತನಾಡಿದರೆ, ಬಂಧಿಸುವುದಾಗಿ ಬೆದರಿಸಿದ್ದಾರೆ ಎಂದು ಟೀಕಿಸಿದರು.

ದಕ್ಷಿಣ ಕನ್ನಡದಲ್ಲಿ ಬಜರಂಗದಳದ ಕಾರ್ಯಕರ್ತ ಶರಣ್ ಪಂಪ್ವೆಲ್ ಅವರು ಗಡಿ ದಾಟದಂತೆ ಕಡಿವಾಣ ಹಾಕಿದ್ದಾರೆ. ಬೆಂಗಳೂರಿನಲ್ಲಿ ಪುನೀತ್ ಕೆರೆಹಳ್ಳಿಯವರು ಪ್ರಾಮಾಣಿಕವಾಗಿ ಬಾಂಗ್ಲಾ ದೇಶೀಯರನ್ನು ಪತ್ತೆ ಹಚ್ಚಿ ಪೊಲೀಸರು ಮಾಡುವ ಕೆಲಸ ಮಾಡಿದರೆ, ಅವರನ್ನೂ ಬಂಧಿಸಿದ್ದಾರೆ ಎಂದು ಆಕ್ಷೇಪಿಸಿದರು. ಅಕ್ರಮವಾಗಿ ಗೋಸಾಗಣೆ ಮಾಡುವ ದೇಶದ್ರೋಹಿಗಳನ್ನು ಈಗಿನ ಕಾನೂನಿನಡಿ ಅಕ್ರಮ ವಾಹನ ವಶಕ್ಕೆ ಪಡೆದು ಗೋಸಾಗಾಟಗಾರರನ್ನು ಒಳಗೆ ಹಾಕುತ್ತಿದ್ದರು. ಸಿದ್ದರಾಮಯ್ಯನವರ ಸರಕಾರವು ಬಂಧಿತರಿಗೆ ಸ್ಟೇಷನ್ ಜಾಮೀನು ಕೊಡುವ ಮಸೂದೆ ತರಲು ಮುಂದಾಗಿತ್ತು ಎಂದು ದೂರಿದರು.

ದಕ್ಷಿಣ ಭಾರತದ ನಾಯಕರಾಗಲು ಹೊರಟಿದ್ದಾರೆ



ಸಿದ್ದರಾಮಯ್ಯನವರು ಹಿಂದೆ ವೀರಶೈವ ಲಿಂಗಾಯತ ಪ್ರತ್ಯೇಕ ಎಂದು ಒಡೆಯಲು ಮುಂದಾಗಿದ್ದರು. ಈಗ ತಮ್ಮ ಲೋಪ ಮುಚ್ಚಿ ಹಾಕಿಕೊಳ್ಳಲು ರಾಜ್ಯವನ್ನು ಕೇಂದ್ರದ ವಿರುದ್ಧ ಎತ್ತಿ ಕಟ್ಟುತ್ತಿದ್ದಾರೆ. ಕೇಂದ್ರ ಸರಕಾರವು ರಾಜ್ಯಕ್ಕೆ ಅನ್ಯಾಯ ಮಾಡಿದೆ; ಕೇಂದ್ರ ಸರಕಾರ ದಕ್ಷಿಣ ಭಾರತದ ರಾಜ್ಯಗಳಿಗೂ ಅನ್ಯಾಯ ಮಾಡಿದೆ ಎಂದು ತಿಳಿಸಿ ದಕ್ಷಿಣ ಭಾರತದ ನಾಯಕರಾಗಲು ಹೊರಟಿದ್ದಾರೆ ಎಂದು ಟೀಕಿಸಿದರು.

ಇಂಥ ವಿಭಜಕ ಮಾನಸಿಕ ಸ್ಥಿತಿ ಸಿದ್ದರಾಮಯ್ಯನವರ ದೃಷ್ಟಿಯಿಂದಲೂ ಒಳ್ಳೆಯದಲ್ಲ; ನಮ್ಮ ರಾಜ್ಯದ ದೃಷ್ಟಿ, ಈ ದೇಶದ ಅಭಿವೃದ್ಧಿ ದೃಷ್ಟಿಯಿಂದಲೂ ಒಳ್ಳೆಯದಲ್ಲ ಎಂದು ಇನ್ನೊಂದು ಪ್ರಶ್ನೆಗೆ ಉತ್ತರ ನೀಡಿದರು. ಇವರ ಸರಕಾರ ದೆಹಲಿಗೆ ಹೋಗಿ ನಮ್ಮ ತೆರಿಗೆ ನಮ್ಮ ಹಕ್ಕು ಎಂದು ಪ್ರತಿಭಟನೆ ಮಾಡಿ ಬಂದಿತ್ತು. ಹಣಕಾಸಿನ ಸಚಿವರಾದ ಸಿದ್ದರಾಮಯ್ಯನವರು ರಾಜ್ಯದಲ್ಲಿ ಗ್ಯಾರಂಟಿಗೆ ಹಣ ಕ್ರೋಡೀಕರಿಸಲು ಸಾಧ್ಯವಾಗದೇ ಅಬಕಾರಿ ಇಲಾಖೆ ಗುರಿಯನ್ನು 40 ಸಾವಿರ ಕೋಟಿಗೆ ಏರಿಸಿದ್ದಾರಲ್ಲವೇ? ನಿಮ್ಮ ಕೃಪಾಕಟಾಕ್ಷದಿಂದ ಕುಡುಕರ ಸಂಖ್ಯೆ ಹೆಚ್ಚಾಗುತ್ತಿದೆ. ನಾಳೆ ಇವರು ನಮ್ಮ ತೆರಿಗೆ ನಮ್ಮ ಹಕ್ಕು ಎಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕಿದರೆ ಏನು ಮಾಡುತ್ತೀರಿ ಎಂದು ಪ್ರಶ್ನಿಸಿದರು.

ಕೇಂದ್ರದಿಂದ ರಾಜ್ಯಕ್ಕೆ ಯಾವುದೇ ರೀತಿ ಅನ್ಯಾಯ ಆಗಿಲ್ಲ. ಸಣ್ಣಪುಟ್ಟ ವ್ಯತ್ಯಾಸ ಇದ್ದರೆ ಪ್ರತಿಭಟನೆ ಮಾಡದೇ, ಕೇಂದ್ರ ಸರಕಾರದ ಮನ ಒಲಿಸಬೇಕಿತ್ತು ಎಂದರು. ಕರ್ನಾಟಕದಲ್ಲಿ ಬೆಂಗಳೂರು ಮಹಾನಗರ ಗರಿಷ್ಠ ತೆರಿಗೆ ಕೊಡುತ್ತದೆ. ಈ ತೆರಿಗೆ ಹಣವನ್ನು ಬೆಂಗಳೂರಿಗೇ ಬಂಡವಾಳವಾಗಿ ಬಳಸುವುದಾಗಿ ಹೇಳಿದರೆ, ರಾಯಚೂರು, ಕೊಪ್ಪಳ, ಬೆಳಗಾವಿ, ಶಿವಮೊಗ್ಗ ಜಿಲ್ಲೆ ಸ್ಥಿತಿ ಏನಾಗಬೇಕು ಎಂದು ಕೇಳಿದರು.

ಹಣಕಾಸಿನ ಸಚಿವರಾಗಿ ಸಿದ್ದರಾಮಯ್ಯನವರು ರಾಜ್ಯದ ಅಭಿವೃದ್ಧಿಯನ್ನು ಚಿಂತಿಸಬೇಕಲ್ಲವೇ? ಅದೇರೀತಿ ಈ ದೇಶದ ಪ್ರಧಾನಿ, ಹಣಕಾಸಿನ ಸಚಿವೆಯಾಗಲೀ ಜಾಗತಿಕ ಸವಾಲು ಎದುರಿಸುವ ಸಂದರ್ಭದಲ್ಲಿ ಹಾಗೂ ಭಾರತವನ್ನು ಅಭಿವೃದ್ಧಿ ಪಥದಲ್ಲಿ ಒಯ್ಯುವ ಸಂದರ್ಭದಲ್ಲಿ ಕರ್ನಾಟಕದ ಜೊತೆಗೆ ಮಹಾರಾಷ್ಟ್ರವೂ ಹೆಚ್ಚು ತೆರಿಗೆ ನೀಡುತ್ತದೆ; ಹಾಗೆಂದು ಕರ್ನಾಟಕಕ್ಕೆ ಅನ್ಯಾಯ ಮಾಡಬೇಕೆಂದಲ್ಲ. ಕರ್ನಾಟಕಕ್ಕೂ ನ್ಯಾಯ ಕೊಟ್ಟಿದ್ದಾರೆ ಎಂದರು.

ಕಾಂಗ್ರೆಸ್ ಸರಕಾರ ಹಣಕಾಸಿನ ಕೊರತೆಯಿಂದ ತನ್ನ ಗ್ಯಾರಂಟಿಗಳ ಅನುಷ್ಠಾನವನ್ನೂ ಸರಿಯಾಗಿ ಮಾಡಿಲ್ಲ; ಅಲ್ಲದೇ ಹಣಕಾಸಿನ ಕೊರತೆಯಿಂದ ತನ್ನ ಕೈಯನ್ನು ಕಟ್ಟಿ ಹಾಕಿ ಇಂಥ ಪರಿಸ್ಥಿತಿಗೆ ಬಂದಿದೆ ಎಂದು ಆರೋಪಿಸಿದರು.

# ಟ್ರ್ಯಾಕ್ಟರ ಎಂಜಿನ್ ಪಲ್ಟಿ : ಚಾಲಕ ಗಂಭೀರ ಗಾಯ



**ಜಮಖಂಡಿ:ಫೆ.2–**ನಗರದಲ್ಲಿ ಟ್ರ್ಯಾಕ್ಟರ ಎಂಜಿನ್ ಪಲ್ಟಿಯಾದ ಪರಿಣಾಮವಾಗಿ ಟ್ರ್ಯಾಕ್ಟರ್ ಚಾಲಕ ಗಂಭೀರವಾಗಿ ಗಾಯಗೊಂಡಿದ್ದು ಸಾವು ಬದುಕಿನ ಮಧ್ಯೆ ಹೋರಾಟ ನಡೆಸಿರುವ ಘಟನೆ ಜರುಗಿದೆಗಾಯಾಳು ಚಾಲಕನನ್ನು ಬಾಗಲಕೋಟೆ ಜಿಲ್ಲೆಯ ಬಿಳಗಿ ತಾಲೂಕಿನ ನಾಗರಾಳ ತಾಂಡದ ನಿವಾಸಿ ಸುನಿಲ್ ರಾಟೋಡ್(30) ಎಂದು ಮಾಹಿತಿ ತಿಳಿದು ಬಂದಿದೆ.

ನಗರದ ರಮಾ ನಿವಾಸ ಪ್ರವಾಸಿ ಮಂದಿರದ ಮುಂಭಾಗದಲ್ಲಿ ಏರಿಕೆ ಇರುವ ರಸ್ತೆಯಲ್ಲಿ ಪುಟ ಪಾತ್ ನಿರ್ಮಿಸಲು ಬಳಸುವಂತಹ ವಸ್ತುಗಳನ್ನು ಸಾಗಿಸುತ್ತಿದ್ದ ವೇಳೆ ಏಕಾಏಕಿ ಎಂಜಿನ್ ಪಲ್ಟಿಯಾದ ಪರಿಣಾಮವಾಗಿ ಎಂಜಿನ್ ಹಾಗೂ ಟ್ರ್ಯಾಲಿ ಒಳಗಡೆ ಚಾಲಕ ಸಿಲುಕಿಕೊಂಡಿದ್ದು ನಂತರ ಸ್ಥಳಿಯರು ಜೆಸಿಪಿ ಮೂಲಕ ಆತನನ್ನು ಹೊರ ತೆಗೆಯಲಾಗಿದೆ ಎಂದು ಮಾಹಿತಿ ಲಭ್ಯವಾಗಿದೆ.

ಸಾವು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದ ಚಾಲಕನನ್ನ ಚಿಕಿತ್ಸೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಥಳಕ್ಕೆ ಜಮಖಂಡಿ ಶಹರ ಠಾಣೆ ಪಿಎಸ್ಐ ಅನಿಲ್ ಕುಂಬಾರ್ ನೇತೃತ್ವದ ಪೊಲಿಸ್ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ

# ಕುಖ್ಯಾತ ಇರಾನಿ ಗ್ಯಾಂಗ್ ಬಂಧನ: 27.30 ಲಕ್ಷ ರೂ ಮೊತ್ತದ ಸ್ವತ್ತು ಜಪ್ತಿ



**ಕಲಬುರಗಿ,ಫೆ.2–**ಅಂತರರಾಜ್ಯ ಕುಖ್ಯಾತ ಇರಾನಿ ಗ್ಯಾಂಗನ್ನು ಬಂಧಿಸಿ 27.30 ಲಕ್ಷ ರೂಪಾಯಿ ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳುವಲ್ಲಿ ಸಬ್-ಅರ್ಬನ್ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.

ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು,ನಗರ ಹೊರವಲಯದ ತಾವರಗೇರಾ ಕ್ರಾಸ್ ಹತ್ತಿರ ಕೈಯಲ್ಲಿ ಮಾರಕಾಸ್ತ್ರ ಹಿಡಿದು ಮುಖಕ್ಕೆ ಬಟ್ಟೆ ಕಟ್ಟಿಕೊಂಡು ರೋಡಿಗೆ ಹೋಗಿ ಬರುವ ವಾಹನ ಸವಾರರನ್ನು ತಡೆದು ದರೋಡೆಗೆ ಯತ್ನಿಸಲಾಗುತ್ತಿದೆ ಎಂಬ ಮಾಹಿತಿ ಮೇಲೆ ಡಿಸಿಪಿ ಪ್ರವೀಣ್ ಹೆಚ್.ನಾಯಕ್, ಸಬ್-ಅರ್ಬನ್ ಉಪ ವಿಭಾಗದ ಎಸಿಪಿ ಬಸವೇಶ್ವರ ಅವರ ಮಾರ್ಗದರ್ಶನದಲ್ಲಿ ಪಿಐ ನಟರಾಜ ಲಾಡೆ ಅವರ ನೇತೃತ್ವದಲ್ಲಿ ಪಿಎಸ್ಐ ಶಶಿಕಲಾ, ಸಿಬ್ಬಂದಿಗಳಾದ ಪುಂಡಲೀಕ,ನಾಗರಾಜ, ಎಂ.ಎ.ಬೇಗ್, ಮಂಜುನಾಥ, ಫಿರೋಜ್, ಮಲ್ಲಿಕಾರ್ಜುನ, ಸುಲ್ತಾನ್, ಅನೀಲ, ಶಶಿಕಾಂತ, ಮಹೇಶ, ಶಶಿಕಾಂತ ಮತ್ತು ಮೋಸಿನ್ ಪಟೇಲ್ ಅವರನ್ನು ಒಳಗೊಂಡ ತಂಡ ಕಾರ್ಯಾಚರಣೆ ನಡೆಸಿ ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಶಿವಾಜಿ ನಗರದ ಜಹೀರ್ ಅಬ್ಬಾಸ್ ಅಲಿ ತಂದೆ ಶೇಖುಬ್ ಅಲಿ, ಅಲಿ ರಜಾಕ್ ತಂದೆ ಶೇಖುಬ್ ಬೇಗ್, ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಅಂಬೆವಿಲಿ ಇಂದಿರಾ ನಗರದ ಲಾಲ್ ಸಮೀರ್ ಶೇಖ್ ತಂದೆ ಜಾಫರ್ ಶೇಖ್, ಮಧ್ಯಪ್ರದೇಶ ರಾಜ್ಯದ ಅಮನ್ ನಗರದ ಖಾಸಿಂ ತಂದೆಎ ಚೋಚೋ ಜಾಫ್ರಿ, ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಶಿವಾಜಿ ನಗರದ ಅಲಿಮಿರ್ಜಾ ತಂದೆ ದರಬೇಶ, ಮಹಾರಾಷ್ಟ್ರ ಕಲ್ಯಾಣ ಜಿಲ್ಲೆಯ ಅಂಬೆವಿಲಿ ಪಟೇಲ್ ಕಾಲೋನಿಯ ಜಾಫರ್ ಅಲಿ ಸೈಯದ್ ತಂದೆ ಆಸೀಫ್ ಅಲಿ ಸೈಯದ್ ಮತ್ತು ಜಾಫರ್ ತಂದೆ ಅಜಮ್ ಸೈಯದ್ ಎಂಬುವವರನ್ನು ಬಂಧಿಸಿ ಕೃತ್ಯಕ್ಕೆ ಉಪಯೋಗಿಸಿದ ಕಾರು, ಎರಡು ಬೈಕ್, ರಾಡು, ತಲವಾರ, ಖಾರದ ಪುಡಿ, ಕಪ್ಪು ಬಟ್ಟೆ, 15.30 ಲಕ್ಷ ರೂ.ಮೌಲ್ಯದ 90 ಗ್ರಾಂ.ಬಂಗಾರದ ಆಭರಣ ಸೇರಿ 27.30 ಲಕ್ಷ ರೂ.ಸ್ವತ್ತನ್ನು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

ಪೊಲೀಸ್ ಎಂದು ಹೇಳಿ ಬಂಗಾರದ ಆಭರಣ ದೋಚಿದ ಖದೀಮರು

ಬಂಧಿತ ಆರೋಪಿಗಳು ತೆಲಂಗಾಣ ರಾಜ್ಯದ ಮಹಿಬೂಬ್ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮತ್ತು ಏವಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ತಾವು ಪೊಲೀಸರೆಂದು ವಂಚಿಸಿ ಬಂಗಾರದ ಆಭರಣಗಳನ್ನು ದೋಚಿರುವುದಾಗಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತರಾದ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.

ಬಂಧಿತ ಆರೋಪಿಗಳಲ್ಲಿ ಜಹೀರ್ ತಂದೆ ಶೇಖು ಅಲಿ ಮೇಲೆ ಉತ್ತರ ಪ್ರದೇಶ ರಾಜ್ಯ ಮಂಡಿ ಜಿಲ್ಲೆ ಸಹನಾಪುರ ಪೊಲೀಸ್ ಠಾಣೆಯಲ್ಲಿ ಕಲಂ 419, 420, 379 ಅಡಿ ಪ್ರಕರಣ ದಾಖಲಾಗಿದ್ದು, ಈತನ ಬಗ್ಗೆ ಮಾಹಿತಿ ನೀಡಿದವರಿಗೆ 15 ಸಾವಿರ ಬಹುಮಾನ ಘೋಷಿಸಿದ್ದಾರೆ. ಈತ ನಾಸಿಕ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಳವು ಮಾಡಿದದ ಬೈಕ್ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಬಂಧಿತ ಆರೋಪಿಗಳ ಮೇಲೆ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಹಾಗೂ ಕರ್ನಾಟಕದ ವಿವಿಧ ಪೊಲೀಸ್ ಠಾಣೆಗಳಲ್ಲಿ ವಂಚನೆ, ಸುಲಿಗೆ ಹಾಗೂ ದರೋಡೆ ಪ್ರಕರಣಗಳು ದಾಖಲಾಗಿವೆ ಎಂದು ವಿವರಿಸಿದರು.

ಈ ಕುಖ್ಯಾತ ಇರಾನಿ ಗ್ಯಾಂಗ್‌ನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

# ಫೆ.9 ರಂದು ರಾಜ್ಯಾದ್ಯಂತ ಪ್ರತಿಭಟನೆ: ಡಿ.ಜಿ.ಸಾಗರ

**ಕಲಬುರಗಿ,ಫೆ.2–**ಎಸ್.ಸಿ ಮತ್ತು ಎಸ್.ಟಿ.ವಿದ್ಯಾರ್ಥಿಗಳ ಮೇಲೆ ವಿಶ್ವವಿದ್ಯಾಲಯಗಳಲ್ಲಿ ಧರ್ಮ, ಜಾತಿ ಹೆಸರಿನಲ್ಲಿ ನಡೆಯುತ್ತಿರುವ ಕಿರುಕುಳ, ದೌರ್ಜನ್ಯಗಳನ್ನು ತಡೆಗಟ್ಟಲು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ (ಯುಜಿಸಿ) ತಂದಿರುವ ನಿಯಮಗಳನ್ನು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಸ್ವಾಗತಿಸುತ್ತದೆ ಎಂದು ಸಮಿತಿ ರಾಜ್ಯ ಸಂಚಾಲಕ ಡಿ.ಜಿ.ಸಾಗರ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್.ಸಿ ಮತ್ತು ಎಸ್.ಟಿ.ವಿದ್ಯಾರ್ಥಿಗಳಿಗೆ ಮಾತ್ರ ಪ್ರತ್ಯೇಕ ನಿಯಮ ರೂಪಿಸಬೇಕು ಎಂದು ಒತ್ತಾಯಿಸಿದರು.

ಯುಜಿಸಿ ತಂದಿರುವ ನಿಯಮಗಳಿಗೆ ಸುಪ್ರೀಂಕೋರ್ಟ್ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕೇಂದ್ರ ಸರ್ಕಾರ ಕೂಡಲೇ ಮುಂದಾಗಬೇಕು ಮತ್ತು ಯುಜಿಸಿ ತಂದಿರುವ ನಿಯಮ ಎಸ್.ಸಿ/ಎಸ್.ಟಿ.ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಹೊರಡಿಸಬೇಕು ಎಂದು ಆಗ್ರಹಿಸಿ ಫೆ.9 ರಂದು ಬೆಳಿಗ್ಗೆ 11.30ಕ್ಕೆ ರಾಜ್ಯದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆ, ಧರಣಿ ನಡೆಸಿ ಪ್ರಧಾನ ಮಂತ್ರಿ ಹಾಗೂ ಕೇಂದ್ರ ಮಾನವ ಸಂಪನ್ಮೂಲ ಹಾಗೂ ಕೌಶಲ್ಯ ಅಭಿವೃದ್ಧಿ ಸಚಿವರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಪತ್ರ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು. ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ಚಿಂತಕರು ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಅವರು ಮನವಿ ಮಾಡಿದರು.



ಸಮಿತಿ ರಾಜ್ಯ ಖಜಾಂಚಿ ಬಿ.ಸಿ.ವಾಲಿ, ಜಿಲ್ಲಾ ಮುಖಂಡರಾದ ಸುರೇಶ ಹಾದಿಮನಿ, ಹೆಚ್.ಶಂಕರ, ಉಮೇಶ ನರೋಣಾ, ಎಸ್.ಪಿ.ಸುಳ್ಳದ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ನಿರಾಶಾದಾಯಕ ಬಜೆಟ್ ಬಜೆಟ್: ಜಗದೇವ ಗುತ್ತೇದಾರ

**ಕಲಬುರಗಿ,ಫೆ.2–**ಕರ್ನಾಟಕದವರೇ ಆದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ಬಹು ನಿರೀಕ್ಷೆಯಲ್ಲಿದ್ದ ಕರ್ನಾಟಕದ ಜನರಿಗೆ ಭಾರಿ ನಿರಾಸೆ ತಂದಿದೆ. ಅವರು ಮಂಡಿಸಿದ ಬಜೆಟ್ ನಲ್ಲಿ ಕರ್ನಾಟಕಕ್ಕೆ ಮಲತಾಯಿ ಧೋರಣೆ ತಾಳಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ ಟೀಕಿಸಿದ್ದಾರೆ.



ಇದೊಂದು ಅರ್ಥಹೀನ ಹಾಗೂ ನಿರಾಸೆದಾಯಕ ಬಜೆಟ್ ಆಗಿದ್ದು ಆದಾಯ ತೇರಿಗೆಯಲ್ಲಿ ಯಾವುದೇ ಬದಲಾವಣೆ ತಂದಿರುವದಿಲ್ಲ. ಮೇಲಾಗಿ ಅತೀ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ಕಿಂಚಿತ್ತು ಗಮನಹರಿಸದೇ ಇರುವದು ಈ ಭಾಗದ ಜನರಿಗೆ ಮೈಮೇಲೆ ಬರೆ ಎಳೆದಂತಾಗಿದೆ. 371 (ಜೆ) ಅಡಿಯಲ್ಲಿ ರಾಜ್ಯ ಸರಕಾರ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ವಿಶೇಷವಾದ ಅನುದಾನ ನೀಡುತ್ತಿದೆ. ಕೇಂದ್ರ ಸರಕಾರವು ಕೂಡ ವಿಶೇಷ ಅನುದಾನ ನಿಡುವಂತೆ ರಾಜ್ಯ ಸರಕಾರ ಕೇಂದ್ರಕ್ಕೆ ಮನವಿ ಮಾಡಿತ್ತು. ಆದರೆ ಯಾವುದೇ ಅನುದಾನ ನೀಡದೇ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ದ್ರೋಹ ಮಾಡಿದೆ. ಹಿಂದಿನ ಯುಪಿಎ ಸರಕಾರದಲ್ಲಿ ರೈಲ್ವೆ ಸಚಿವರಾಗಿದ್ದ ಅವಧಿಯಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಕಲಬುರಗಿಯಲ್ಲಿ ರೈಲ್ವೆ ವಿಭಾಗ ಘೋಷಿಸಲಾಗಿತ್ತು. ಸದರಿ ರೈಲ್ವೆ ವಿಭಾಗ ಆರಂಭಿಸುವ ಬಗ್ಗೆ ಈ ಬಜೆಟ್‌ನಲ್ಲಿ ಚಕಾರ ಎತ್ತದೆ ಇರುವದು, ಯುಪಿಎ ಸರಕಾರದಲ್ಲಿ ಕಲಬುರಗಿಯಲ್ಲಿ ಆರಂಭಿಸಲಾದ ಇಎಸ್ಐ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಚಕಾರ ಎತ್ತದೇ ಇರುವದು ಈ ಭಾಗದ ಜನರಿಗೆ ದ್ರೋಹ ಮಾಡಿದೆ. ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಮಂಡಿಸಿದ ಬೆನ್ನಲ್ಲೇ ಷೇರು ಮಾರುಕಟ್ಟೆ ಅಲ್ಲೋಲ ಕಲ್ಲೋಲವಾಗಿ ಕುಸಿತ ಕಂಡಿದ್ದು, ಹೂಡಿಕೆದಾರರಿಗೆ 30 ನಿಮಿಷದಲ್ಲಿ ಸುಮಾರು 13 ಲಕ್ಷ ಕೋಟಿ ನಷ್ಟ ಕಂಡು ಷೇರು ಮಾರುಕಟ್ಟೆ ಮಹಾಪತನದ ಹಾದಿಯಲ್ಲಿ ಸಾಗುತ್ತಿದೆ. ಭಾರತ ದೇಶದ ಬೆನ್ನೆಲುಬಾದ ರೈತರಿಗೆ ಈ ಬಜೆಟ್‌ನಲ್ಲಿ ಯಾವುದೇ ರೀತಿಯ ಹೇಳಿಕೊಳ್ಳುವಂತಹ ರೈತರ ಪರವಾದ ಹೊಸ ಯೋಜನೆಗಳು ಘೋಷಿಸದೇ ರೈತರಿಗೆ ಹೇಳತೀರದಷ್ಟು ಅನ್ಯಾಯವಾಗಿದೆ.

ಇಂದಿನ ಬಜೆಟ್‌ನಲ್ಲಿ ಚುನಾವಣಾ ದೃಷ್ಟಿಯಿಂದ ತಮಿಳುನಾಡಿಗೆ ಹಾಗೂ ಪಶ್ಚಿಮ ಬಂಗಾಳ, ಆಸ್ಸಾಂ, ಪುದುಚೇರಿ ಮತ್ತು ಕೇರಳ ರಾಜ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಕರ್ನಾಟಕದ ಪಾಲಿಗೆ ಹಾಗೂ ರೈತರು, ಹಿಂದುಳಿದವರು, ಕಡುಬಡವರು, ಕೂಲಿಕಾರ್ಮಿಕರ ಪಾಲಿಗೆ ಇದು ಶೂನ್ಯ ಬಜೆಟ್ ಆಗಿದೆ. ಒಟ್ಟಾರೆ ಈ ಬಜೆಟ್ ಜನವಿರೋಧಿ, ಅಭಿವೃದ್ಧಿಗೆ ಮಾರಕವಾದ ಶೂನ್ಯ ಬಜೆಟ್ ಇದಾಗಿದೆ ಎಂದು ತಿಳಿಸಿದ್ದಾರೆ.

# ಮಕ್ಕಳ ಹಬ್ಬದಲ್ಲಿ ಗಮನ ಸೆಳೆದ ಬಾಲ್ಯ ವಿವಾಹ ಮುಕ್ತಿ ರಥ ವಾಹನ






ಯುವಮಾರ್ಗ ಸುದ್ದಿ

**ರಾಯಚೂರು ಫೆ,2–** ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026 ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಫೆ.2ರಂದು ಆಯೋಜಿಸಿದ್ದ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಬಾಲ್ಯ ವಿವಾಹ ಮುಕ್ತಿ ರಥ ವಾಹನ ಗಮನ ಸೆಳೆಯಿತು.

ನಾವೆಲ್ಲರೂ ಒಟ್ಟಾಗಿ ಬಾಲ್ಯ ವಿವಾಹ ಪದ್ಧತಿಯನ್ನು ನಿರ್ಮೂಲನೆ ಮಾಡೋಣ. ಎಲ್ಲಾ ಮಕ್ಕಳು ತಮ್ಮ ಹಕ್ಕುಗಳು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಕೆಲಸ ಮಾಡೋಣ ಎನ್ನುವ ಸಂದೇಶ ಹೊತ್ತ ಜಾಗೃತಿ ವಾಹನವು ಜಿಲ್ಲಾ ಕ್ರೀಡಾಂಗಣದ ವಿವಿಧೆಡೆ ಸಂಚರಿಸಿತು. ದೊಡ್ಡ ಸಂಖ್ಯೆಯಲ್ಲಿ ಮಕ್ಕಳು ಸೇರಿರುವ ಕಾರ್ಯಕ್ರಮದಲ್ಲಿ ಸಂಚಾರಿ ಜಾಗೃತಿ ರಥ ವಾಹನದ ಮೂಲಕ ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಮಕ್ಕಳಿಗೆ ಜಾಗೃತಿ ಮೂಡಿಸಲಾಯಿತು. ಮಕ್ಕಳಿಗೆ ಸುರಕ್ಷಿತ ಸ್ಪರ್ಶ, ಅಸುರಕ್ಷಿತ ಸ್ಪರ್ಶ, ಮಕ್ಕಳ ಸಹಾಯವಾಣಿ ಸಂಖ್ಯೆ: 1098 ಹಾಗೂ ಪೋಕ್ಸೋ ಕಾಯ್ದೆ ಕುರಿತು ಕರಪತ್ರ ಹಂಚುವ ಮೂಲಕ ಹಾಗೂ ವೇದಿಕೆಯ ಮುಂಭಾಗದಲ್ಲಿ ಸೆಲ್ಫಿ ಸ್ಟಾಂಡ್ ಇಟ್ಟು ಜಾಗೃತಿ ಮೂಡಿಸಲಾಯಿತು.

ಬಾಲ್ಯ ವಿವಾಹ ನಿಷೇಧ ಕುರಿತು ಆಡಿಯೋ ಜಿಂಗಲ್ಸ್ ಮೂಲಕವೂ ಜಾಗೃತಿ ಮೂಡಿಸಲಾಯಿತು.

ಈ ಜಾಗೃತಿ ವಾಹನಕ್ಕೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಚಾಲನೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ ಕುಮಾರ್ ಕಾಂದೂ, ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮಹಾಪಾತ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಅಮರೇಶ್ ಹಾವಿನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶರಣಮ್ಮ, ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷ ಈರಮ್ಮ ಹಾಗೂ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ರಾಯಚೂರು ಉತ್ಸವ: ಫೆಬ್ರವರಿ 4ರಿಂದ ಹೆಲಿಕ್ಯಾಪ್ಟರ್ ರೈಡ್

**ರಾಯಚೂರು ಫೆ,2–** ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 4ರಿಂದ 9ರವರೆಗೆ ರಾಯಚೂರು ಜಿಲ್ಲೆಯ ನಾಗರೀಕರಿಗೆ ಬಾನಂಗಳದಿಂದ ರಾಯಚೂರು ವೀಕ್ಷಣೆಗೆ ರಾಯಚೂರು ಬೈಸ್ಕಯ್ ಎಂಬ ವಿಶೇಷ ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವನ್ನು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವು ಫೆಬ್ರವರಿ 4ರಿಂದ 9ರವರೆಗೆ ಪ್ರತಿ ದಿನ ಬೆಳಗ್ಗೆ 8 ರಿಂದ ಮಧ್ಯಾಹ್ನ 12 ಗಂಟೆವರೆಗೆ ಹಾಗೂ ಮಧ್ಯಾಹ್ನ 12.30 ರಿಂದ ಸಂಜೆ 4.30 ರವರೆಗೆ ಇರುತ್ತದೆ. ಪ್ರತಿಯೊಬ್ಬರಿಗೆ 3,500 ರೂ. ಶುಲ್ಕ ಇರುತ್ತದೆ. 2 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿರುತ್ತದೆ. ಆನ್‌ಲೈನ್ ಟಿಕೇಟ್ ಬುಕ್ಕಿಂಗ್‌ಗೆ ವೆಬ್‌ಸೈಟ್ ವಿಳಾಸ: www.helitaxii.com CxÀªÁ https://share.google/cEDrw hwrh JdOvBFYK ಮೂಲಕ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಫ್‌ಲೈನ್ ಟಿಕೇಟ್‌ಗಾಗಿ ಮೊಬೈಲ್ ಸಂಖ್ಯೆ: 9482565016, 9448527188, 9611112356, 7676522104, 6362238100ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ರಾಯಚೂರು ಫೆ,2–** ಇಲ್ಲಿನ ರೇಷ್ಮೆ ಇಲಾಖೆಯಿಂದ 2023–24 ಹಾಗೂ 2024–25ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಉತ್ತಮ ಪ್ರಗತಿ ಸಾಧಿಸಿರುವ ಅರ್ಹ ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಶಸ್ತಿಗಾಗಿ ರೇಷ್ಮೆ ಬೆಳೆಗಾರರು ಕನಿಷ್ಠ 1.00 ಎಕರೆ ಹಿಪ್ಪುನೇರಳೆ ತೋಟ ಹಾಗೂ ಪ್ರತ್ಯೇಕ ಹುಳು ಸಾಕಾಣಿಕಾ ಮನೆ ಹೊಂದಿರಬೇಕು. 100 ಮೊಟ್ಟೆಗೆ ಸರಾಸರಿ ರೇಷ್ಮೆ ಗೂಡಿನ ಇಳುವರಿ 65 ಕೆ.ಜಿ. ಹಾಗೂ ಒಂದು ಎಕರೆಗೆ ರೇಷ್ಮೆ ಗೂಡಿನ ಉತ್ಪಾದನೆ 500 ಕೆ.ಜಿ.ಗಿಂತ ಕಡಿಮೆ ಇರಬಾರದು. ರೇಷ್ಮೆ ಬೆಳೆಗಾರರು ರೇಷ್ಮೆ ಪಾಸ್ ಬುಕ್, ರೇಷ್ಮೆ ಮೊಟ್ಟೆ ಅಥವಾ ಚಾಕಿ ಖರೀದಿಸಿರುವ ಬಗ್ಗೆ ಹಾಗೂ ರೇಷ್ಮೆ ಗೂಡು ಮಾರಾಟ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಹೊಂದಿರಬೇಕು.

ರೇಷ್ಮೆ ಬೆಳೆಗಾರರು ಸ್ಥಳೀಯ ರೇಷ್ಮೆ ವಿಸ್ತರಣಾಧಿಕಾರಿಗಳು ಅಥವಾ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ ಅಗತ್ಯ ಮಾಹಿತಿಗಳನ್ನು ದಾಖಲಾತಿಗಳೊಂದಿಗೆ ಒದಗಿಸಿ ಅರ್ಜಿ ಪಡೆಯುವುದು. ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 06–02–2026ರ ಒಳಗೆ ಕಚೇರಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–220322ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ರೇಷ್ಮೆ ಇಲಾಖೆಯ ರೇಷ್ಮೆ ಕೃಷಿ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಠೋದ್ಧಾರದ ಶಿಲ್ಪಿ ಹಾರಕೂಡ ಶ್ರೀ ಕರಬಸಯ್ಯ ಸ್ವಾಮಿ : ಉಪ್ಪಿನ ಬೆಟಗೇರಿ ಶ್ರೀ



**ಬಸವಕಲ್ಯಾಣ:ಫೆ.2:** ತಾನು ಉಪವಾಸ ಇದ್ದರೂ ಚಿಂತೆಯಿಲ್ಲ ಹಾರಕೂಡ ಶ್ರೀಮಠ ಬೆಳೆಯಬೇಕು, ಬೆಳಗಬೇಕು ಎಂದು ಇಡೀ ತಮ್ಮ ಜೀವನವನ್ನೇ ಸವೆಸಿದ ಮಠೋದ್ಧಾರದ ಶಿಲ್ಪಿ ಶ್ರೀ ಕರಬಸಯ್ಯ ಸ್ವಾಮಿ ಹಿರೇಮಠರವರು ಎಂದು ಉಪ್ಪಿನ ಬೆಟಗೇರಿಯ ಕುಮಾರ ವಿರೂಪಾಕ್ಷ ಸ್ವಾಮಿಗಳು ನುಡಿದರು.

ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ವೇದಮೂರ್ತಿ ಲಿಂಗೈಕ್ಯ ಕರಬಸಯ್ಯಸ್ವಾಮಿ ಹಿರೇಮಠರವರ ಪುಣ್ಯ ಸ್ಮರಣೋತ್ಸವ ಸಮಾರಂಭದ ಅಂಗವಾಗಿ ಆಯೋಜಿಸಿದ ಕಲ್ಯಾಣ ಕರ್ನಾಟಕ ಸಂಗೀತ ದಿನಾಚರಣೆಯ ದಶಮಾನೋತ್ಸವ ಹಾಗೂ ಕಲ್ಯಾಣ ಕರ್ನಾಟಕ ಸಂಗೀತ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ನೇತ್ರತ್ವ ವಹಿಸಿ ಮಾತನಾಡಿದ ಅವರು ಬಾಲ್ಯಾವಸ್ಥೆಯಲ್ಲಿರುವ ಪೂಜ್ಯ ಚನ್ನವೀರ ಶಿವಾಚಾರ್ಯರನ್ನು ಹೆಗಲ ಮೇಲೆ ಹೊತ್ತಿಕೊಂಡು ಹಳ್ಳಿಹಳ್ಳಿಗೆ ಓಡಾಡಿ ಭಕ್ತರಿಂದ ಸಂಗ್ರಹಿಸಿದ ದೇಣಿಗೆಯಲ್ಲಿ ನಿತ್ಯ ದಾಸೋಹ ನಡೆಸಿಕೊಂಡು ಮಠವನ್ನು ಇವತ್ತಿನ ಮಟ್ಟಕ್ಕೆ ಎತ್ತರಿಸಿದ ಮಹಾನ್ ತ್ಯಾಗ ಜೀವಿ ಕರಬಸಯ್ಯನವರು.

ದೊಡ್ಡ ಸಂಗೀತ ಕಲಾವಿದರಾದ ಕರಬಸಯ್ಯನವರು ತಮ್ಮ ಇಡಿ ಜೀವನವನ್ನೇ ನಾದಮಯ ಗೊಳಿಸಿಕೊಂಡವರು.

ಇಂತಹ ಅಪರೂಪದ ನಾದ ತಪಸ್ವಿ ಕರಬಸಯ್ಯನವರ ಹೆಸರಿನಲ್ಲಿ ಪೂಜ್ಯ ಡಾ. ಚೆನ್ನವೀರ ಶಿವಾಚಾರ್ಯರು ಪ್ರತಿ ವರ್ಷ ನಡೆಸಿಕೊಂಡು ಬರುತ್ತಿರುವ ಕಲ್ಯಾಣ ಕರ್ನಾಟಕ ಸಂಗೀತ ದಿನಾಚರಣೆ ಹಾಗೂ ಕಲ್ಯಾಣ ಕರ್ನಾಟಕ ಸಂಗೀತ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರತಿಯೊಬ್ಬರೂ ತಂದೆ–ತಾಯಿಗಳಿಗೆ ಅರ್ಥಪೂರ್ಣ ಗೌರವ ಕೊಡಬೇಕು ಎನ್ನುವ ವಾಸ್ತವ ಸಂದೇಶಕ್ಕೆ ಜೀವಂತ ನಿದರ್ಶನವಾಗಿದೆ ಎಂದು ನುಡಿದರು.

ಡಾ. ಚನ್ನವೀರ ಶಿವಾಚಾರ್ಯರು ನಾಡು ಕಂಡ ಅಪರೂಪದ ಶಿವಾಚಾರ್ಯರು, ಅವರ ಜೀವಿತಕಾಲದಲ್ಲಿ ಬದುಕಿರುವ ನಾವುಗಳೇ ಧನ್ಯರು ಎಂದು ಭಾವ ತುಂಬಿ ನುಡಿದರು.

ಸಮಾರಂಭದ ಪಾವನ ಸನ್ನಿಧಾನವನ್ನು ಹಾರಕೂಡದ ಪೂಜ್ಯ ಶ್ರೀ ಷ. ಬ್ರ. ಡಾ. ಚನ್ನವೀರ ಶಿವಾಚಾರ್ಯರು ವಹಿಸಿದ್ದರು.

ಆನಂದರಾವ ಭೀಮಶಾ ಝಳಕೆ, ಶಂಕರರಾವ ಮಾಣಿಕೆ, ಪಂಚಾಕ್ಷರಿ ಹಿರೇಮಠ, ಗುರುರಾಜ ಬಿ. ಹಿರೇಮಠ, ಯೋಗಿರಾಜ ಬಿ. ಹಿರೇಮಠ, ಶ್ರೀಮತಿ ಸುಮಂಗಲಾ ವಿರುಪಾಕ್ಷಯ್ಯ ಕಿಣಗಿ, ಸುಧಾರಾಣಿ ಮಡಿವಾಳಯ್ಯ ಕುಪಗೀರಮಠ, ಶ್ರೀಮತಿ ವಿಜಯಲಕ್ಷ್ಮೀ ಬಸಯ್ಯ ಆರ್. ಮಠ, ಶ್ರೀಮತಿ ಊರ್ವಶಿ ಡಾ॥ ಚಂದ್ರಮೌಳೇಶ್ವರ ಹಿರೇಮಠ, ಅಲ್ಲಮಪ್ರಭು ಮಲ್ಲಿನಾಥ ಹಿರೇಮಠ, ಡಾ? ಸುಭದ್ರಾ ಮಲ್ಲಿನಾಥ ಹಿರೇಮಠ, ಗುರುಪಾದಯ್ಯ ಶಿವಶಂಕ್ರಯ್ಯ ಕುಂಬಾರಮಠ, ಚನ್ನವೀರಯ್ಯ ಶಿವಶಂಕ್ರಯ್ಯ ಕುಂಬಾರಮಠ ನರೋಣಾ, ರಾಜಕುಮಾರ ಬಸವರಾಜ ಹಂಜಿಗೆ, ಪ್ರಭುರಾಜ ಕಂಬಳಿಮಠ, ರವಿಕಾಂತ ಗದಗಯ್ಯ ಚಿಟ್ಟೆ, ಚನ್ನವೀರ ಗದಗಯ್ಯ ಚಿಟ್ಟೆ, ಶ್ರೀಶೈಲ ಗದಗಯ್ಯ ಚಿಟ್ಟೆ ಭಾಗವಹಿಸಿದ್ದರು.

ಡಾ. ಶಿವಶಂಕರ ಕೋಟನೂರ ಪ್ರಾರ್ಥನಾ ಗೀತೆ ಹಾಡಿದರು.

ನವಲಿಂಗ ಪಾಟೀಲ ಸ್ವಾಗತಿಸಿ, ನಿರೂಪಣೆ ಮಾಡಿದರು.

ಶಾರದಾ ಪೊಲೀಸ್ ಪಾಟೀಲ ಆಲೂರ ಹಾಗೂ ರತೀಕಾ ಶಿವಕುಮಾರ ಚಿತಾಪೂರ ಭರತನಾಟ್ಯ ಪ್ರದರ್ಶನ ಮಾಡಿದರು.

ಶ್ರೀ ಗುರುಲಿಂಗ ಶಿವಾಚಾರ್ಯ ಉಚಿತ ವಸತಿ ಶಾಲೆಯ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಖ್ಯಾತ ಚಲನಚಿತ್ರ ಹಿನ್ನೆಲೆ ಗಾಯಕರಾದ ಶ್ರೀ ರವೀಂದ್ರ ಸೊರಗಾಂವಿ ಬೆಂಗಳೂರು, ಡಾ. ಸಿದ್ದರಾಮಯ್ಯ ಸ್ವಾಮಿ ಗೋರಟಾ, ಕುಮಾರಿ ರಾಜಶ್ರೀ ದಿಲೀಪಕುಮಾರ ಸ್ವಾಮಿ ರಾಜೇಶ್ವರ ಮತ್ತು ಶ್ರೀ ಕಾರ್ತಿಕ ಸ್ವಾಮಿ ಯಲ್ಲದಗುಂಡಿ, ವಿದ್ಯಾಶ್ರೀ ದಯಾನಂದ ಹಿರೇಮಠ,ಶ್ರೀ ರಾಜಕುಮಾರ ಧೂಳಪ್ಪ ಮುಡಬಿ ಬೆಂಗಳೂರು ಸೇರಿದಂತೆ ನಾಡಿನ 40 ಜನ ಕಲಾವಿದರು ರಾತ್ರಿವಿಡಿ ಸಂಗೀತ ಸೇವೆ ಸಲ್ಲಿಸಿದರು.

ವಿಠಲ ಹೂಗಾರ ಸಂಗೀತ ಕಾರ್ಯಕ್ರಮದ ಸಂಚಾಲನೆ ಮಾಡಿದರು.

# ಪ್ರಯೋಗಾಲಯ ತಂತ್ರಜ್ಞರ ಸೇವೆ ಅದಮ್ಯ ಆದರೆ ಅಗೋಚರ: ಕೃಷ್ಣಾಚಾರಿ



**ಬೀದರ:ಫೆ.2:** ಕೋವಿಡ್ ಸಂದರ್ಭದಲ್ಲಿ ಪ್ರಯೋಗಾಲಯ ತಂತ್ರಜ್ಞರ ಸೇವೆ ಅದಮ್ಯವಾಗಿತ್ತು. ಆದರೆ ಅಗೋಚರವಾಗಿದೆ. ತಂತ್ರಜ್ಞರಿಗೂ ತಮ್ಮದೇ ಆದ ಹಲವು ಸಮಸ್ಯೆಗಳಿವೆ. ಅವುಗಳನ್ನು ಈಡೇರಿಸಲು ಐಕ್ಯತೆಯಿಂದ ಹೋರಾಡಬೇಕಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ವಿ.ಬಿ.ಕೃಷ್ಣಾಚಾರಿ ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳ ಸಂಘ ಬೆಂಗಳೂರು ಜಿಲ್ಲಾ ಘಟಕ ಬೀದರ ವತಿಯಿಂದ ಚಿಕ್ಕಪೇಟ್ ಸಮೀಪದ ಹೆಬ್ಬಾಳೆ ಕನ್ವೆಶನ್ ಹಾಲ್‌ನಲ್ಲಿ ಆಯೋಜಿಸಿದ ಅಂತರಾಷ್ಟ್ರೀಯ ಪ್ರಯೋಗಾಲಯ ತಂತ್ರಜ್ಞರ ದಿನಾಚರಣೆ ಹಾಗೂ ಅಭಿನಂದನಾ ಸಮಾರಂಭ ಉದ್ದೇಶಿಸಿ ಮಾತನಾಡಿದರು.

ಈ ಹಿಂದೆ ನಮ್ಮಲ್ಲಿ ಒಗ್ಗಟ್ಟು ಇರಲಿಲ್ಲ. ಸಂಘಟನೆಯೂ ಇರಲಿಲ್ಲ. ನಮಗೆ ಇದುವರೆಗೆ ಕೆಜಿಐಡಿ ಹಾಗೂ ಜಿಪಿಎಫ್ ವ್ಯವಸ್ಥೆ ಕೂಡ ಇಲ್ಲ. ಆದ್ದರಿಂದ ನಮಗೆ ಜಿಂದಾಲ್ ಕಂಪನಿಯ ನೌಕರರು ಎಂದು ಅಣಕಿಸುತಿದ್ದಾರೆ. ಈ ಕಾರಣಕ್ಕಾಗಿ ಸಂಘವನ್ನು ಹುಟ್ಟುಹಾಕಿ ಅದರ ಮೂಲಕವೇ ನಮ್ಮ ಬೇಕು ಬೇಡಗಳನ್ನು ಸರ್ಕಾರದ ಮುಂದಿಡಲು ಪ್ರಯತ್ನಿಸಬೇಕಾಗಿದೆ. ಸರ್ಕಾರ ಇನ್ನೂ ಹೆಚ್ಚಿನ ಪ್ರಯೋಗಾಲಯ ತಂತ್ರಜ್ಞರ ನೇಮಕ ಮಾಡಿಕೊಳ್ಳಬೇಕು. ಕೋವಿಡ್ ಸಂದರ್ಭದಲ್ಲಿ ಸಲ್ಲಿಸಿದ ಸೇವೆ ಆಧರಿಸಿ ಕೋವಿಡ್ ಭತ್ಯೆ ನೀಡಬೇಕು. ಕೆಜಿಐಡಿ ಹಾಗೂ ಜಿಪಿಎಫ್ ವ್ಯವಸ್ಥೆ ಮಾಡಬೇಕು. ಸ್ಟಾಫ್ ನರ್ಸ್‌ಗಳಿಗೆ ನೀಡುವಂತೆ ತಂತ್ರಜ್ಞರಿಗೂ ಪರಿಹಾರ ರಜೆ ಜೊತೆಗೆ 15 ದಿವಸಗಳ ಪರಿಹಾರ ವೇತನ ಹೆಚ್ಚುವರಿಯಾಗಿ ನೀಡಬೇಕು. ಕರ್ತವ್ಯದ ಸಂಧ್ಯಾಕಾಲದಲ್ಲಿ ತಂತ್ರಜ್ಞರಿಗೂ ನಿವೃತ್ತಿ ವೇತನ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ಅವಶ್ಯಕತೆ ಇದೆ. ಒಗ್ಗಟ್ಟಿನಿಂದ ಸಂಘವನ್ನು ಮುನ್ನಡೆಸೋಣ. ಬೀದರನಲ್ಲಿ ಇಂದು ಪ್ರಪ್ರಥಮ ಪ್ರಯೋಗಾಲಯ ತಂತ್ರಜ್ಞರ ದಿನಾಚರಣೆ ಆಯೋಜಿಸಿದ್ದು ಖುಷಿ ತಂದಿದೆ. ದೇಶದ ಬೆನ್ನೆಲುಬು ರೈತನಾದರೆ, ರೈತರಂತಹ ಬಡರೋಗಿಗಳ ಬೆನ್ನೆಲುಬು ತಂತ್ರಜ್ಞರಾಗಿದ್ದಾರೆ ಎಂದರು.

ಬ್ರಿಮ್ಸ್ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಶಿವಯೋಗ ಬಾಳಿ ಮಾತನಾಡಿ ತಂತ್ರಜ್ಞರು ಪ್ರಯೋಗಾಲಯಕ್ಕೆ ಬಂದ ರೋಗಿಗಳಿಗೆ ಪ್ರೀತಿಯಿಂದ ಜವಾಬ್ದಾರಿಯಿಂದ ಪರೀಕ್ಷಿಸುವುದು ನಮ್ಮ ಕರ್ತವ್ಯ. ಜೊತೆಗೆ ಮುಂಜಾಗ್ರತಾ ಕ್ರಮವೂ ಅನುಸರಿಸಬೇಕು. ಸ್ವಚ್ಛತೆ ಮತ್ತು ಶಿಸ್ತು ನಮ್ಮ ಮೂಲಮಂತ್ರವಾಗಬೇಕು. ನಾವು ಶಿಸ್ತು ಕಾಪಾಡಿದರೆ ಮುಂದೆ ನಮ್ಮ ಮಕ್ಕಳು ಅದನ್ನು ಅನುಸರಿಸುತ್ತಾರೆ. ಆದ್ದರಿಂದ ಐಕ್ಯತೆಯಿಂದ ನಿಮ್ಮ ಹಕ್ಕುಗಳಿಗಾಗಿ ಸಮಯ ಕೊಟ್ಟು ಹೋರಾಡಿ ಎಂದರು.

ಪ್ರಯೋಗಾಲಯ ತಂತ್ರಜ್ಞ ಅರವಿಂದ ಕುಲಕರ್ಣಿ ಮಾತನಾಡಿ ತಂತ್ರಜ್ಞರು ಮೌನ ವೀರರು. ಆಯುಧವಿಲ್ಲದೆ ರೋಗಿಯ ರೋಗಗಳನ್ನು ಹೋರಾಡಲು ಸತತ ಪ್ರಯತ್ನಶೀಲರು. ಕೈಯಲ್ಲಿ ಸಾಧನ, ಮನದಲ್ಲಿ ಕರ್ತವ್ಯ ನಿರ್ವಹಿಸುವ ಮನೋಭಾವ. ಇಂತಹ ತಂತ್ರಜ್ಞರ ಸೇವೆ ಅಗಾಧವಾಗಿದೆ ಎಂದರು.

ಇದೇ ವೇಳೆ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ವಿ.ಬಿ.ಕೃಷ್ಣಾಚಾರಿ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಪ್ರಿಯಂಕಾ ಗುರುದೇವ ವಂದೇ ಮಾತರಂ ಹಾಡಿದರು. ರೇಣುಕಾ ರಾಜಕುಮಾರ ಸ್ವಾಗತ ಗೀತೆ ಹಾಡಿದರು. ಭಾರತಿಬಾಯಿ ಸ್ವಾಗತಿಸಿದರು. ಡಾ. ರಾಜಕುಮಾರ ಹೆಬ್ಬಾಳೆ ನಿರೂಪಿಸಿದರು. ಗುರುನಾಥ ಉದಗಿರೆ ವಂದಿಸಿದರು. ವೇದಿಕೆ ಮೇಲೆ ಬೆಂಗಳೂರಿನ ತಂತ್ರಜ್ಞರಾದ ಶ್ರೀಮತಿ ಗೀತಾ, ಉಮಾ ಪಾಟೀಲ, ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳ ಸಂಘದ ನಿರ್ದೇಶಕ ಸಂತೋಷರೆಡ್ಡಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಘದ ಸದಸ್ಯರಾದ ಗಿರಿರಾಜ್ ಸ್ವಾಮಿ, ಶಿವು ಮುತ್ತತಿ, ಶಿವರಾಜಪ್ಪ, ಉದಯ ಚಿಮಕೊಡೆ, ವಿಷ್ಣುವರ್ಧನ ರೆಡ್ಡಿ, ಕನ್ಯಾಕುಮಾರಿ, ಅಮೆರಖಾನ್, ಶಿವಕುಮಾರ, ಶಕುಂತಲಾ, ರಾಜಕುಮಾರ ಕುಂಬಾರ, ರವಿ ರಾಠೋಡ್, ಮಹಾನಂದ, ಧನರಾಜ ನಾಗಮಾರಪಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H